ದಾದಾ ಭಗವಾನರ ನಿರೂಪಣೆಯಂತೆ

# ಸಂಘರ್ಷಣೆಯನ್ನು ತಪ್ಪಿಸಿ



ಯಾರೊಂದಿಗಾದರೂ ಸಂಘರ್ಷಣೆಯು ಉಂಟಾದರೆ, ಅದು ನಮ್ಮ ಅಜ್ಞಾನದ ಸಂಕೇತ!

Kannada

ದಾದಾ ಭಗವಾನರ ನಿರೂಪಣೆಯಂತೆ

# ಸಂಘರ್ಷಣೆಯನ್ನು ತಪ್ಪಿಸಿ

ಮೂಲ ಗುಜರಾತಿ ಸಂಕಲನೆ: ಡಾಕ್ಟರ್: ನಿರುಬೇನ್ ಅಮೀನ್

ಕನ್ನಡ ಅನುವಾದ: ಮಹಾತ್ಮ ವೃಂದ

ಪ್ರಕಾಶಕರು:		ಶ್ರೀ ಅಜೀತ್ ಸಿ. ಪಟೇಲ್

ದಾದಾ ಭಗವಾನ್ ಆರಾಧನಾ ಟ್ರಸ್ಟ್,

ದಾದಾ ದರ್ಶನ್, 5, ಮಮತಾ ಪಾರ್ಕ್ ಸೊಸೈಟಿ,

ನವ ಗುಜರಾತ್ ಕಾಲೇಜು ಹಿಂಬಾಗ, ಉಸ್ಮಾನಪುರ,

ಅಹ್ಮದಾಬಾದ್- 380014, ಗುಜರಾತ್.

ಫೋನ್: (079) 39830100

**© ಪೂಜ್ಯಶ್ರೀ ದೀಪಕ್‌ಭಾಯಿ ದೇಸಾಯಿ, ತ್ರಿಮಂದಿರ, ಅಡಾಲಜ್ ಜಿಲ್ಲೆ: ಗಾಂಧೀನಗರ ಗುಜರಾತ್.**

ಈ ಪುಸ್ತಕದ ಯಾವುದೇ ಬಿಡಿ ಭಾಗವನ್ನು ಮತ್ತೊಂದೆಡೆ ಉಪಯೋಗಿಸುವುದಾಗಲಿ ಅಥವಾ ಪುನರ್ ಪ್ರಕಟಿಸುವುದಾಗಲಿ ಮಾಡುವ ಮೊದಲು ಕೃತಿಯ ಹಕ್ಕುದಾರರ ಅನುಮತಿಯನ್ನು ಹೊಂದಿರಬೇಕು.

ಪ್ರಥಮ ಆವೃತ್ತಿ: 1000 ಪ್ರತಿಗಳು ನವೆಂಬರ್ 2018

ಭಾವ ಮೌಲ್ಯ: 'ಪರಮ ವಿನಯ ಹಾಗು ನಾನು ಏನನ್ನೂ ತಿಳಿದಿಲ್ಲ' ಎಂಬ ಭಾವನೆ!

ದ್ರವ್ಯ ಮೌಲ್ಯ: 15.00 ರೂಪಾಯಿಗಳು

ಮುದ್ರಣ:		ಅಂಬಾ ಆಫ್ ಸೆಟ್

ಬಿ-99, ಎಲೆಕ್ಟ್ರಾನಿಕ್ಸ್ GIDC,

ಕ-6 ರೋಡ್, ಸೆಕ್ಟರ್-25, ಗಾಂಧಿನಗರ-382044

ಫೋನ್: (079) 39830341

# ತ್ರಿಮಂತ್ರ








ನಮೋ ಅರಿಹಂತಾಣಂ

ನಮೋ ಸಿದ್ಧಾಣಂ

ನಮೋ ಆಯರಿಯಾಣಂ

ನಮೋ ಉವಜ್ಝಾಯಾಣಂ

ನಮೋ ಲೋಯೆ ಸವ್ವಸಾಹೂಣಂ

ಏಸೋ ಪಂಚ ನಮುಕ್ಕಾರೋ;

ಸವ್ವ ಪಾವಪ್ಪಣಾಸಣೋ

ಮಂಗಲಾಣಂ ಚ ಸವ್ವೇಸಿಂ;

ಪಢಮಂ ಹವಯಿ ಮಂಗಲಂ

ಓಂ ನಮೋ ಭಗವತೇ ವಾಸುದೇವಾಯ

ಓಂ ನಮಃ ಶಿವಾಯ

ಜೈ ಸಚ್ಚಿದಾನಂದ್



# 'ದಾದಾ ಭಗವಾನ್' ಯಾರು?

1958ರ ಜೂನ್ ಮಾಸದ ಒಂದು ಸಂಜೆ, ಸುಮಾರು ಆರು ಗಂಟೆಯಾಗಿರಬಹುದು. ಜನಜಂಗುಳಿಯಿಂದ ತುಂಬಿಹೋಗಿದ್ದ ಸೂರತ್ ಪಟ್ಟಣದ ರೈಲ್ವೇ ನಿಲ್ದಾಣದ ಪ್ಲಾಟ್‌ಫಾರ್ಮ್ ಸಂ. 3ರ ಒಂದು ಬೆಂಚಿನ ಮೇಲೆ ಶ್ರೀ ಎ. ಎಮ್. ಪಟೇಲ್ ಎಂಬ ಹೆಸರಿನ ದೇಹರೂಪಿ ಮಂದಿರದಲ್ಲಿ, ಅಕ್ರಮ ರೂಪದಲ್ಲಿ, ಪ್ರಕೃತಿಯ ಲೀಲೆಯಂತೆ, 'ದಾದಾ ಭಗವಾನ್'ರವರು ಸಂಪೂರ್ಣವಾಗಿ ಪ್ರಕಟರಾದರು. ಪ್ರಕೃತಿಯು ಅಧ್ಯಾತ್ಮದ ಅದ್ಭುತ ಆಶ್ಚರ್ಯವನ್ನು ಸೃಷ್ಟಿಸಿತು. ಒಂದು ಗಂಟೆಯೊಳಗೆ ಅವರಿಗೆ ವಿಶ್ವದರ್ಶನವಾಯಿತು. 'ನಾನು ಯಾರು? ದೇವರು ಯಾರು? ಜಗತ್ತನ್ನು ನಡೆಸುವವರು ಯಾರು? ಕರ್ಮ ಎಂದರೆ ಏನು? ಮುಕ್ತಿ ಎಂದರೆ ಏನು?' ಎಂಬ ಜಗತ್ತಿನ ಎಲ್ಲಾ ಆಧ್ಯಾತ್ಮಿಕ ಪ್ರಶ್ನೆಗಳ ಸಂಪೂರ್ಣ ರಹಸ್ಯ ಪ್ರಕಟಗೊಂಡಿತು. ಈ ರೀತಿ, ಪ್ರಕೃತಿಯು ಜಗತ್ತಿನ ಮುಂದೆ ಒಂದು ಅದ್ವಿತೀಯ ಪೂರ್ಣ ದರ್ಶನವನ್ನು ಪ್ರಸ್ತುತಪಡಿಸಿತು ಹಾಗು ಇದಕ್ಕೊಂದು ಮಾಧ್ಯಮವಾದರು, ಗುಜರಾತಿನ ಚರೋತರ್ ಪ್ರದೇಶದ ಭಾದರಣ್ ಎಂಬ ಹಳ್ಳಿಯ ಪಟೇಲರಾಗಿದ್ದ, ವೃತ್ತಿಯಲ್ಲಿ ಕಾಂಟ್ರಾಕ್ಟರಾಗಿದ್ದ, ಸಂಪೂರ್ಣವಾಗಿ ರಾಗದ್ವೇಷದಿಂದ ಮುಕ್ತರಾಗಿದ್ದವರು ಶ್ರೀ ಎ. ಎಮ್. ಪಟೇಲ್!

'ವ್ಯಾಪಾರದಲ್ಲಿ ಧರ್ಮವಿರಬೇಕು, ಧರ್ಮದಲ್ಲಿ ವ್ಯಾಪಾರವಲ್ಲ', ಎಂಬ ಸಿದ್ಧಾಂತದ ಪಾಲನೆ ಮಾಡುತ್ತಾ ಇವರು ಇಡೀ ಜೀವನವನ್ನು ಕಳೆದರು. ಜೀವನದಲ್ಲಿ ಅವರು ಯಾರಿಂದಲೂ ಹಣ ತೆಗೆದುಕೊಳ್ಳಲಿಲ್ಲವಷ್ಟೇ ಅಲ್ಲ, ತಮ್ಮ ಭಕ್ತರಿಗೆ ತಮ್ಮ ಸಂಪಾದನೆಯ ಹಣದಲ್ಲಿ ಯಾತ್ರೆ ಮಾಡಿಸುತ್ತಿದ್ದರು.

ಅವರು ಅನುಭವಿಗಳಾಗಿದ್ದರು. ಅದೇ ರೀತಿ, ಅವರು ಸಿದ್ಧಿಸಿಕೊಂಡ ಅದ್ಭುತವಾದ ಜ್ಞಾನಪ್ರಯೋಗದ ಮೂಲಕ ಕೇವಲ ಎರಡೇ ಗಂಟೆಗಳಲ್ಲಿ ಬೇರೆ ಮುಮುಕ್ಷುಗಳಿಗೂ ಸಹ ಆತ್ಮಜ್ಞಾನದ ಅನುಭವ ಉಂಟಾಗುವಂತೆ ಮಾಡುತ್ತಿದ್ದರು. ಇದನ್ನು ಅಕ್ರಮ ಮಾರ್ಗ ಎಂದು ಕರೆಯಲಾಯಿತು. ಅಕ್ರಮ, ಅದರರ್ಥ ಯಾವುದೇ ಕ್ರಮವಿಲ್ಲದ ಎಂದು. ಹಾಗು ಕ್ರಮ ಎಂದರೆ ಹಂತ ಹಂತವಾಗಿ, ಒಂದರ ನಂತರ ಒಂದರಂತೆ ಕ್ರಮವಾಗಿ ಮೇಲೇರುವುದು ಎಂದು. ಅಕ್ರಮ ಎಂದರೆ ಲಿಫ್ಟ್ ಮಾರ್ಗ, ಒಂದು ಶಾರ್ಟ್ ಕಟ್.

ಅವರು ತಾವೇ ಪ್ರತಿಯೊಬ್ಬರಿಗೂ 'ದಾದಾ ಭಗವಾನ್ ಯಾರು?' ಎಂಬುದರ ರಹಸ್ಯದ ಬಗ್ಗೆ ಹೇಳುತ್ತಾ ನುಡಿಯುತ್ತಿದ್ದರು "ನಿಮ್ಮ ಎದುರು ಕಾಣುತ್ತಿರುವವರು 'ದಾದಾ ಭಗವಾನ್' ಅಲ್ಲ. ನಾನು ಜ್ಞಾನಿ ಪುರುಷ. ನನ್ನೊಳಗೆ ಪ್ರಕಟಗೊಂಡಿರುವವರು 'ದಾದಾ ಭಗವಾನ್'. ದಾದಾ ಭಗವಾನ್ ಹದಿನಾಲ್ಕು ಲೋಕಗಳಿಗೂ ಒಡೆಯರು. ಅವರು ನಿಮ್ಮಲ್ಲೂ ಇದ್ದಾರೆ, ಎಲ್ಲರಲ್ಲೂ ಇದ್ದಾರೆ. ನಿಮ್ಮಲ್ಲಿ ಅವ್ಯಕ್ತರೂಪದಲ್ಲಿದ್ದಾರೆ ಮತ್ತು 'ಇಲ್ಲಿ' ನನ್ನೊಳಗೆ ಸಂಪೂರ್ಣ ರೂಪದಲ್ಲಿ ಪ್ರಕಟಗೊಂಡಿದ್ದಾರೆ. ದಾದಾ ಭಗವಾನ್‌ರವರಿಗೆ ನಾನೂ ನಮಸ್ಕಾರ

## ದಾದಾ ಭಾಗವಾನ್ ಫೌಂಡೇಶನ್ ನಿಂದ ಪ್ರಕಾಶಿತವಾದ ಕನ್ನಡ ಹಾಗೂ ಹಿಂದಿ ಪುಸ್ತಕಗಳು

## ಕನ್ನಡ ಪುಸ್ತಕಗಳು

1. ಆತ್ಮಸಾಕ್ಷಾತ್ಕಾರ
2. ಅಡ್ಜಸ್ಟ್ ಎವ್ರಿವೇರ್
3. ಸಂಘರ್ಷಣೆಯನ್ನು ತಪ್ಪಿಸಿ

## ಹಿಂದಿ ಪ್ರಸ್ತಕಗಳು

1. ಜ್ಞಾನಿ ಪುರುಷ್ ಕೀ ಪಹಚಾನ್
2. ಸರ್ವ್ ದುಃಖೋಂ ಸೇ ಮುಕ್ತಿ
3. ಕರ್ಮ್ ಕಾ ಸಿದ್ಧಾಂತ್
4. ಆತ್ಮಬೋಧ್
5. ಅಂತಃಕರಣ್ ಕಾ ಸ್ವರೂಪ್
6. ಜಗತ್ ಕರ್ತಾ ಕೌನ್?
7. ಭುಗತೇ ಉಸೀ ಕಾ ಭೂಲ್
8. ಅಡ್ಜಸ್ಟ್ ಎವೆರಿವ್ಹೇರ್
9. ಟಕರಾವ್ ಟಾಲಿಏ
10. ಹುವಾ ಸೋ ನ್ಯಾಯ್
11. ಚಿಂತಾ
12. ಕ್ರೋಧ್
13. ಮೈ ಕೌನ್ ಹೂಂ?
14. ವರ್ತಮಾನ್ ತೀರ್ಥಂಕರ್ ಸೀಮಂಧರ್ ಸ್ವಾಮಿ
15. ಮಾನವ ಧರ್ಮ
16. ಪ್ರೇಮ್
17. ಅಹಿಂಸಾ
18. ಪ್ರತಿಕ್ರಮಣ್ (ಸಂ.)
19. ಪಾಪ್–ಪುಣ್ಯ್
20. ಕರ್ಮ್ ಕಾ ವಿಜ್ಞಾನ್
21. ಚಮತ್ಕಾರ್
22. ವಾಣಿ, ವ್ಯವಹಾರ್ ಮೇ...
23. ಪೈಸೋಂಕಾ ವ್ಯವಹಾರ್
24 .ಪತಿ–ಪತ್ನಿ ಕಾ ದಿವ್ಯ ವ್ಯವ–ಹಾರ್
25. ಮಾತಾ ಪಿತಾ ಔರ್ ಬಚ್ಚೋಂಕಾ...
26. ಸಮಝ್ ಸೇ ಪ್ರಾಪ್ತ್ ಬ್ರಹ್ಮಚರ್ಯ್
27. ನಿಜದೋಷ್ ದರ್ಶನ್ ಸೇ...
28. ಕ್ಲೇಶ್ ರಹಿತ್ ಜೀವನ್
29. ಗುರು–ಶಿಷ್ಯ್
30. ಸೇವಾ–ಪರೋಪಕಾರ್
31. ತ್ರಿಮಂತ್ರ್
32. ಭಾವನಾ ಸೇ ಸುಧರೇ ಜನ್ಮೋಜನ್ಮ್
33. ದಾನ್
34. ಮೃತ್ಯು ಕೆ ರಹಸ್ಯ
35. ದಾದಾ ಭಗವಾನ್ ಕೌನ್?
36. ಸತ್ಯ–ಅಸತ್ಯ ಕೆ ರಹಸ್ಯ
37. ಆಪ್ತವಾಣಿ – 1 ರಿಂದ 9
38. ಆಪ್ತವಾಣಿ – 13 (ಭಾಗ 1 – 2)

ದಾದಾ ಭಗವಾನ್ ಫೌಂಡೇಶನ್‌ನಿಂದ ಗುಜರಾತಿ ಭಾಷೆಯಲ್ಲೂ ಹಲವಾರು ಪುಸ್ತಕಗಳು ಪ್ರಕಾಶಿತವಾಗಿವೆ. www.dadabhagwan.org ನಲ್ಲಿ ಸಹ ನೀವು ಈ ಎಲ್ಲಾ ಪುಸ್ತಕಗಳನ್ನು ಪಡೆಯಬಹುದು.ದಾದಾ ಭಗವಾನ್ ಫೌಂಡೇಶನ್‌ನಿಂದ ಪ್ರತಿ ತಿಂಗಳು ಹಿಂದಿ, ಗುಜರಾತಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ 'ದಾದಾವಾಣಿ' ಮ್ಯಾಗಜಿನ್ ಪ್ರಕಾಶಿತವಾಗುತ್ತದೆ.

# ಸಂಪಾದಕೀಯ

'ಸಂಘರ್ಷಣೆಯನ್ನು ತಪ್ಪಿಸಿ' ಎಂಬ ಈ ಒಂದು ವಾಕ್ಯವನ್ನು ಜೀವನದಲ್ಲಿ ಅಂತರ್ಗತ ಮಾಡಿಕೊಂಡವರ ಜೀವನವು ಸುಂದರವಾಗುವುದಲ್ಲದೆ, ಅವರಿಗೆ ಮೋಕ್ಷವು ಕೂಡಾ ಅತಿ ಶೀಘ್ರದಲ್ಲಿ ಸಮ್ಮುಖವಾಗಿ ಬಂದು ನಿಲ್ಲುವುದು! ಇದು ನಿರ್ವಿವಾದದ ವಾಕ್ಯವಾಗಿದೆ.

ಅಕ್ರಮ ವಿಜ್ಞಾನಿ ಸಂಪೂಜ್ಯ ದಾದಾಶ್ರೀಯವರು ನೀಡಿರುವಂತಹ ಈ ಸೂತ್ರವನ್ನು ಅಳವಡಿಸಿಕೊಂಡ ಎಷ್ಟೋ ಜನರು ಸಂಸಾರ ಸಾಗರದಿಂದ ದಡ ಸೇರಿದ್ದಾರೆ! ಅವರೆಲ್ಲರೂ ಜೀವನದಲ್ಲಿ ಸುಖ-ಶಾಂತಿಯನ್ನು ಹೊಂದುವುದರ ಜೊತೆಗೆ, ಮೋಕ್ಷ ಮಾರ್ಗಿಗಳಾಗಿದ್ದಾರೆ. ಇದಕ್ಕಾಗಿ ಜೀವನದಲ್ಲಿ ಪ್ರತಿಯೊಬ್ಬರು ಕೇವಲ ಒಂದೇ ಒಂದು ದೃಢ ನಿಶ್ಚಯವನ್ನು ಮಾಡಬೇಕಾಗಿದೆ. ಅದೇನೆಂದರೆ, 'ನಾನು ಯಾವುದೇ ರೀತಿಯ ಸಂಘರ್ಷಣೆಗಳಿಗೆ ಒಳಪಡಬಾರದು. ಎದುರಿನವರು ಎಷ್ಟೇ ತಾಕಿಸಿಕೊಂಡು ಓಡಾಡುತ್ತಿದ್ದರೂ, ಅದು ಏನೇ ಆಗಿರಲಿ, ನಾನು ಮಾತ್ರ ಸ್ಪಂದಿಸುವುದಿಲ್ಲ.' ಹೀಗೆ ನಿಶ್ಚಯ ಮಾಡಿಬಿಟ್ಟರೆ, ಅಷ್ಟೇ ಸಾಕು. ಅಂತಹವರಿಗೆ ಪ್ರಾಕೃತಿಕವಾಗಿ ಒಳಗಿನಿಂದಲೇ ಸಂಘರ್ಷಣೆಯನ್ನು ತಪ್ಪಿಸುವ ಅರಿವು ಮೂಡುತ್ತದೆ.

ರಾತ್ರಿ ಕತ್ತಲಲ್ಲಿ ಕೊಠಡಿಯಿಂದ ಹೊರಗೆ ಹೊರಟಾಗ ಎದುರಿಗೆ ಗೋಡೆ ಅಡ್ಡ ಬಂದರೆ ಏನು ಮಾಡುತ್ತೇವೆ? ಗೋಡೆಯೊಂದಿಗೆ ಸಿಟ್ಟು ಮಾಡಿಕೊಂಡು, 'ನೀನು ಯಾಕೆ ಅಡ್ಡ ಬಂದೆ, ಇದು ನನ್ನ ಮನೆ' ಎಂದು ಜಗಳವಾಡಿದರೆ ಆಗುತ್ತದೆಯೇ? ಇಲ್ಲ, ಅಲ್ಲಿ ಎಷ್ಟು ಸರಳವಾಗಿ ಎದುರಿಗೇನು ಅಡ್ಡ ಸಿಕ್ಕಿದರೂ ತಡಕಾಡುತ್ತಾ ಬಾಗಿಲನ್ನು ಹುಡುಕಿಕೊಂಡು ಹೊರಗೆಬರಲು ಪ್ರಯತ್ನಿಸುತ್ತೇವೆ, ಯಾಕೆ? ಏಕೆಂದರೆ, ಅಲ್ಲಿ ನಮಗೆ ಅರಿವಿದೆ, ಗೋಡೆಗೆ ಹೊಡೆದುಕೊಂಡರೆ ನಮ್ಮ ತಲೆಗೆ ಪೆಟ್ಟುಬೀಳುತ್ತದೆ ಎಂದು.

ಕಿರಿದಾದ ಬೀದಿಯಲ್ಲಿ ರಾಜನು ನಡೆದುಕೊಂಡು ಹೋಗುವಾಗ ಗೂಳಿಯೊಂದು ಓಡುತ್ತಾ ಎದುರಿಗೆ ಬಂದರೆ, ಆಗ ರಾಜ ಗೂಳಿಗೆ, 'ಯಾಕೆ ಹೀಗೆ ಅಡ್ಡ ಬರುತ್ತಿರುವೆ? ನನಗೆ ಜಾಗ ಬಿಡು. ಇದು ನನ್ನ ರಾಜ್ಯ, ನನ್ನ ಬೀದಿ, ನನಗೆ ರಸ್ತೆ ಬಿಡು' ಎಂದು ಹೇಳಲು ಹೋದರೆ, ಆಗ ಗೂಳಿ ಹೇಳುತ್ತದೆ 'ನೀನು ರಾಜನಾದರೆ, ನಾನು ಮಹಾರಾಜ! ಬಾ ನೋಡೋಣ!' ಎಂದು. ಆಗ, ಎಂತಹ ಬಲಶಾಲಿಯಾದ ರಾಜಾಧಿರಾಜನಾಗಿದ್ದರೂ ಅಲ್ಲಿಂದ ಮೆಲ್ಲಗೆ ಜಾರಿಕೊಳ್ಳಲೇ ಬೇಕಾಗುತ್ತದೆ. ಹೇಗಾದರೂ ಸರಿ, ಚಾವಡಿಯ ಮೇಲೆ ಏರಿಯಾದರೂ ಪಾರಾಗಬೇಕಾಗುತ್ತದೆ. ಯಾಕಾಗಿ? ಆ ಸಂಘರ್ಷಣೆಯನ್ನು ತಪ್ಪಿಸುವ ಸಲುವಾಗಿ!

ಇಂತಹ ಸಾಧಾರಣ ಪ್ರಸಂಗಗಳಿಂದ ಅರಿತುಕೊಂಡು, ಯಾರೇ ನಮಗೆ ತಾಕಿಸಲು ಬಂದರೂ, ಅವರುಗಳು ಕೂಡಾ ಗೋಡೆಯ ಅಥವಾ ಗೂಳಿಯ ಹಾಗೆಂದು ಧೃಡೀಕರಿಸಿಕೊಳ್ಳಬೇಕು. ನಮಗೆ ಸಂಘರ್ಷಣೆಯಿಂದ ತಪ್ಪಿಸಿ ಕೊಳ್ಳಬೇಕಿದ್ದರೆ ಜಾಣತನದಿಂದ ಜಾರಿಕೊಳ್ಳಬೇಕು. ಎಲ್ಲೆಂದರಲ್ಲಿ ಸಂಘರ್ಷಣೆಗಳು ಎದುರಾದಾಗ, ಅದನ್ನು ತಪ್ಪಿಸಬೇಕು. ಹೀಗೆ ನಡೆದುಕೊಳ್ಳುವುದರಿಂದ ಜೀವನವು ಕ್ಲೇಶಮುಕ್ತವಾಗಿರುವುದು ಹಾಗು ಮೋಕ್ಷ ಪ್ರಾಪ್ತಿಯಾಗುವುದು.

-ಡಾಕ್ಟರ್. ನಿರುಬೇನ್ ಅಮೀನ್

# ಸಂಘರ್ಷಣೆಯನ್ನು ತಪ್ಪಿಸಿ

## ಎದುರಾಗ ಬೇಡಿ ಸಂಘರ್ಷಣೆಗೆ.....

'ಯಾರೊಂದಿಗೂ ಸಂಘರ್ಷಣೆಗೆ ಒಳಪಡಬೇಡ ಹಾಗು ಸಂಘರ್ಷಣೆಯನ್ನು ತಪ್ಪಿಸು', ಎಂಬ ನಮ್ಮ ಈ ವಾಕ್ಯವನ್ನು ಯಾರು ಆರಾಧಿಸುವರೋ, ಅವರು ನೇರವಾಗಿ ಮೋಕ್ಷಕ್ಕೆ ಹೋಗುತ್ತಾರೆ. ನಿಮ್ಮ ಭಕ್ತಿ ಮತ್ತು ನಮ್ಮ ವಚನದ ಬಲದಿಂದ ಎಲ್ಲಾ ಕೆಲಸಗಳು ನೆರವೇರುತ್ತವೆ. ಅದಕ್ಕೆ, ನಿಮ್ಮ ಸಿದ್ಧತೆಯು ಇರಬೇಕು. ನಮ್ಮ ಒಂದೇ ಒಂದು ವಾಕ್ಯವನ್ನು ಯಾರೇ ಪಾಲಿಸಿದರೂ, ಅವರು ಮೋಕ್ಷಕ್ಕೆ ಹೋಗುವುದು ಕಂಡಿತ. ಅದೂ ಬಿಡಿ, ಕೇವಲ ನಮ್ಮ ಒಂದು ಶಬ್ಧವನ್ನು 'ಹೇಗಿದೆಯೋ ಹಾಗೆ' ಗಂಟಲಿನಲ್ಲಿ ಇಳಿಸಿ ಕೊಂಡುಬಿಟ್ಟರೆ ಅಷ್ಟೇ ಸಾಕು, ಮೋಕ್ಷವು ಕೈಯಲ್ಲಿಯೇ ಬಂದುಬಿಡುತ್ತದೆ. ಹಾಗಿದೆ! ಆದರೆ ಅದನ್ನು 'ಹೇಗಿದೆಯೋ ಹಾಗೆ' ಸ್ವೀಕರಿಸಬೇಕು. ನಮ್ಮ ಒಂದು ಶಬ್ಧವನ್ನು ದಿನವಿಡೀ ಪಾಲನೆ ಮಾಡಿದರೂ ಸಾಕು ಅದ್ಭುತವಾದ ಶಕ್ತಿ ಉತ್ಪನ್ನವಾಗುತ್ತದೆ. ನಮ್ಮೊಳಗೆ ಎಷ್ಟೆಲ್ಲಾ ಶಕ್ತಿಗಳಿವೆ ಎಂದರೆ, ಯಾರು ಹೇಗೇ ಸಂಘರ್ಷಣೆಗೆ ಮುಂದಾದರೂ ಅದನ್ನು ತಪ್ಪಿಸುವಂತಹ ಶಕ್ತಿಯಿದೆ. ಗೊತ್ತಿದ್ದೂ-ಗೊತ್ತಿದ್ದೂ ಹಳ್ಳಕ್ಕೆ ಬೀಳಲು ಸಿದ್ಧತೆಯಲ್ಲಿರುವವರ ಜೊತೆಯಲ್ಲಿ ಹೊಡೆದಾಡಿಕೊಂಡು ಕುಳಿತುಕೊಳ್ಳುವುದು ಯಾಕೆ ಬೇಕು? ಅವರಿಗೇನು ಮೋಕ್ಷಕ್ಕೆ ಹೋಗಬೇಕೆಂಬ ಹಂಬಲವಿಲ್ಲ ಜೊತೆಗೆ ನಿಮ್ಮನ್ನು ಕೂಡಾ ಅವರೊಂದಿಗೆ ಕುಳಿತುಕೊಳ್ಳುವಂತೆ ಮಾಡಿಬಿಡುತ್ತಾರೆ. ಅದು ಹೇಗೆ ಸಾಧ್ಯವಾಗುವುದು? ನಿಮಗೆ ಮೋಕ್ಷಕ್ಕೆ ಹೋಗಲೇ ಬೇಕೆಂದಿರುವಾಗ, ಅಂತಹವರೊಂದಿಗೆ ಹೆಚ್ಚಿನ ಬುದ್ಧಿವಂತಿಕೆಯನ್ನು ತೋರಿಸಲು ಹೋಗಬಾರದು. ಎಲ್ಲಾ ಕಡೆಯಲ್ಲಿಯೂ, ನಾಲ್ಕು ದಿಕ್ಕುಗಳಲ್ಲಿಯೂ ಎಚ್ಚರಿಕೆ ವಹಿಸಬೇಕು. ಇಲ್ಲವಾದರೆ ನೀವು ಈ ಜಂಜಾಟದಿಂದ ಬಿಡಿಸಿಕೊಳ್ಳಲು ಹೋದರೂ ಜಗತ್ತು ಬಿಡುವುದಿಲ್ಲ. ಆದುದರಿಂದ ಸಂಘರ್ಷಣೆಗೆ ಒಳಗಾಗದಂತೆ ಸರಳತೆಯಿಂದ ಜಾರಿಕೊಂಡು ಬಿಡಬೇಕು. ಅರೇ, ನಾವು ಎಲ್ಲಿಯವರೆಗೆ ಹೇಳುತ್ತೇವೆಂದರೆ, ಅಕಸ್ಮಾತ್ ನಿಮ್ಮ ಪಂಚೆ ಬೇಲಿಯ ತಂತಿಗೆ ಸಿಕ್ಕಿಕೊಂಡಿದ್ದು, ನಿಮ್ಮ ಮೋಕ್ಷದ ಗಾಡಿ ಹೊರಡಲು ಸಿದ್ಧವಾಗಿದ್ದರೆ, ಅಲ್ಲಿ ಮೂರ್ಖನ ಹಾಗೆ ಪಂಚೆಯನ್ನು ಬಿಡಿಸಿಕೊಂಡು ಕುಳಿತರೆ ಆಗುತ್ತದೆಯೇ? ಪಂಚೆಯನ್ನು ಬಿಟ್ಟು ಓಡಬೇಕು. ಅರೇ, ಒಂದು ಕ್ಷಣವೂ ಕೂಡಾ ಅದೇ ಅವಸ್ಥೆಗೆ ಅಂಟಿಕೊಂಡಿರುವ ಹಾಗಿಲ್ಲ ಎಂದಮೇಲೆ, ಇನ್ನು ಬೇರೆಲ್ಲಾದರ ಬಗ್ಗೆ ಮಾತನಾಡುವುದಾದರೂ ಏನು? ಯಾವುದಕ್ಕಾದರು ನೀವು ಅಂಟಿಕೊಂಡರೆ, ಆಗ ನೀವು ನಿಮ್ಮ ಸ್ವರೂಪವನ್ನು ಮರೆತಂತೆ!

ಎಂದಾದರು ತಪ್ಪಿ ನೀವು ಸಂಘರ್ಷಣೆಗೆ ಒಳಗಾದರೆ, ಆಗ ಅದನ್ನು ಸಮಾಧಾನದಿಂದ ನಿಭಾಯಿಸಿಬಿಡಬೇಕು. ಸಹಜವಾಗಿಯೇ, ಸಂಘರ್ಷಣೆಯ ಬೆಂಕಿಯು ಏಳುವ ಮುನ್ನವೇ ನಿವಾರಿಸಿಕೊಂಡುಬಿಡಬೇಕು.

## 'ಟ್ರಾಫಿಕ್ ಲೈಟ್ ' ತಪ್ಪಿಸುವುದು, ಸಂಘರ್ಷಣೆಯನ್ನು

ನಾವು ರಸ್ತೆಯಲ್ಲಿ ಎಷ್ಟೊಂದು ಕಾಳಜಿಯಿಂದ ನಡೆಯುತ್ತೇವೆ ಅಲ್ಲವೇ? ಅಲ್ಲಿ ಎದುರಿನ ವ್ಯಕ್ತಿಯು ಸರಿಯಿಲ್ಲದೆ ಇರಬಹುದು ಹಾಗೂ ಹೇಗೆಂದರೆ ಹಾಗೆ ಬಂದು ನಮಗೆ ಹೊಡೆದು ಹಾನಿಯನ್ನು ಉಂಟುಮಾಡಬಹುದು, ಅದು ಬೇರೆ ವಿಚಾರವಾಗಿದೆ. ಆದರೆ, ನಮ್ಮಲ್ಲಿ ಅವನಿಗೆ ಕೆಡಕು ಮಾಡಬೇಕೆಂಬ ಇರಾದೆ ಇರಬಾರದು. ನಾವು ಅವರಿಗೆ ಹಾನಿಮಾಡಲು ಹೋದರೆ ಆಗ ನಮಗೂ ಹಾನಿ ಉಂಟಾಗುವುದು. ಯಾವಾಗಲೂ ಪ್ರತಿಯೊಂದು ಸಂಘರ್ಷಣೆಯಿಂದ ಇಬ್ಬರಿಗೂ ನಷ್ಟವಾಗುತ್ತದೆ. ನೀವು ಎದುರಿನವರಿಗೆ ದುಃಖವನ್ನು ಕೊಡಲು ಹೋದರೆ, ಆಗ ಜೊತೆಗೆ ನಿಮಗೂ ಆಗಿಂದಾಗಲೇ 'ಅನ್ ದಿ ಮೊಮೆಂಟ್' ದುಃಖವಾಗದೆ ಇರುವುದಿಲ್ಲ! ಇದು ಸಂಘರ್ಷಣೆಯ ಬಗ್ಗೆ ಆಗಿರುವುದರಿಂದ ನಾನು ಈ ಉದಾರಣೆಯನ್ನು ಕೊಡುತ್ತಿದ್ದೇನೆ: ಈ ರಸ್ತೆಯ ಮೇಲೆ ಚಲಿಸುವ ವಾಹನಗಳ ವ್ಯವಹಾರದ ಧರ್ಮವು ಏನೆಂದು ತಿಳಿಸುತ್ತದೆ, 'ಸಂಘರ್ಷಣೆಗೆ ಒಳಪಟ್ಟರೆ ನಿನ್ನ ಮೃತ್ಯು; ಸಂಘರ್ಷಣೆಯಿಂದ ಅಪಾಯವಿದೆ' ಎಂದು. ಆದುದರಿಂದ ಯಾರೊಂದಿಗೂ ಸಂಘರ್ಷಣೆಗೆ ಒಳಪಡಬಾರದು. ಹಾಗೆಯೇ, ವ್ಯಾವಹಾರಿಕ ಕಾರ್ಯಗಳಲ್ಲಿ ಸಹ ಸಂಘರ್ಷಣೆಗೆ ಅವಕಾಶಕೊಡಬಾರದು. ಯಾವಾಗಲು ಸಂಘರ್ಷಣೆಯು ಅಪಾಯಕಾರಿಯಾಗಿದೆ ಹಾಗೂ ಅದು ಯಾವುದೋ ಒಂದು ದಿನ ನಡೆಯುತ್ತದೆ. ಅದೇನು ತಿಂಗಳಲ್ಲಿ ಇನ್ನೂರು ಬಾರಿ ಆಗುತ್ತದೆಯೇ? ತಿಂಗಳಲ್ಲಿ ಎಷ್ಟು ಬಾರಿ ಹೀಗಾಗುತ್ತದೆ?

**ಪ್ರಶ್ನಕರ್ತ**: ಕೆಲವೊಮ್ಮೆ, ಎರಡು ಅಥವಾ ನಾಲ್ಕು ಬಾರಿ.

**ದಾದಾಶ್ರೀ:** ಹೌದಾ, ಹಾಗಾದರೆ ಅದಷ್ಟನ್ನು ನಾವು ಸುಧಾರಿಸಿಕೊಂಡು ಬಿಡಬೇಕು. ನಾನು ಹೇಳುವುದೇನೆಂದರೆ, ಯಾಕಾಗಿ ನಾವು ಜಗಳವಾಡಬೇಕು? ಯಾವುದೇ ಸಂದರ್ಭದಲ್ಲಿ ಹಾನಿಯನ್ನು ಉಂಟು ಮಾಡಿದರೆ, ಅದು ನಮಗೆ ಶೋಭೆ ತರುವುದಿಲ್ಲ. ಎಲ್ಲರೂ 'ಟ್ರಾಫಿಕ್'ನಲ್ಲಿ ನಿಯಮದ ಪ್ರಕಾರ ನಡೆಯುವಾಗ, ಅಲ್ಲಿ ತನಗೆ ಇಷ್ಟಬಂದಂತೆ ನಡೆಸಲು ಸಾಧ್ಯವಿಲ್ಲ ಅಲ್ಲವೇ? ಆದರೆ ಇಲ್ಲಿ, ತನಗೆ ಇಷ್ಟಬಂದಂತೆ! ನಿಯಮವೇನೂ ಇಲ್ಲ ಅಲ್ಲವೇ? ಅದರಲ್ಲಿ ('ಟ್ರಾಫಿಕ್'ನ ವಿಷಯದಲ್ಲಿ) ಯಾವ ದಿನವೂ ಅಡಚಣೆಯೇ ಬರುವುದಿಲ್ಲ, ಅಲ್ಲಿ ಎಷ್ಟು ಸುಂದರವಾದ ವ್ಯವಸ್ಥೆ ಮಾಡಿರುತ್ತಾರೆ! ಹಾಗೆಯೇ ಅಲ್ಲಿಯ ನಿಯಮಗಳಂತೆ ನೀವು ಅರಿತುಕೊಂಡು ಜೀವನ

ನಡೆಸಿದರೆ, ಮತ್ತೆಂದೂ ಅಡಚಣೆಗಳು ಬರುವುದಿಲ್ಲ. ಇದರ ತಾತ್ಪರ್ಯವೇನೆಂದರೆ, ನಿಯಮವನ್ನು ತಿಳಿದುಕೊಳ್ಳುವುದರಲ್ಲಿ ತಪ್ಪಾಗಿದೆ. ಆದುದರಿಂದ, ನಿಯಮವನ್ನು ಸರಿಯಾಗಿ ತಿಳಿಸಿಕೊಡುವಂತಹ ಅರಿತವರು ಬೇಕಾಗಿದೆ.

ಆ 'ಟ್ರಾಫಿಕ್''ನ ಕಾನೂನು ಪಾಲನೆ ಮಾಡಬೇಕೆಂದು ನೀವು ನಿಶ್ಚಯಿಸಿರುವುದರಿಂದ, ಎಷ್ಟು ಚೆನ್ನಾಗಿ ಪಾಲಿಸಲಾಗುತ್ತದೆ! ಅಲ್ಲಿ ಯಾಕೆ ಅಹಂಕಾರ ತೋರಿಸಲು ಹೋಗುವುದಿಲ್ಲ; ಅವರು ಏನು ಬೇಕಾದರೂ ಹೇಳಲಿ, ನನಗೆ ಹೇಗೆ ಬೇಕೋ ಹಾಗೆ ಮಾಡುತ್ತೇನೆ ಎಂದು ಯಾಕೆ ಹೇಳುವುದಿಲ್ಲ? ಕಾರಣವೇನೆಂದರೆ, ಟ್ರಾಫಿಕ್ ನ ನಿಯಮವನ್ನು ತನ್ನ ಸ್ವಂತ ಬುದ್ಧಿಯಿಂದ ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಆಗುತ್ತದೆ. ಏಕೆಂದರೆ, ಇದು ಸ್ಥೂಲ ಶರೀರದ ವಿಷಯವಾಗಿರುವುದರಿಂದ; ಕೈ ಮುರಿದು ಹೋಗಬಹುದು, ತಕ್ಷಣ ಮರಣವೂ ಸಂಭವಿಸಬಹುದು ಎನ್ನುವ ಅರಿವಿದೆ. ಹಾಗೆಯೇ ಇಲ್ಲಿ ಕೂಡ ಸಂಘರ್ಷಣೆಗೆ ಒಳಗಾದರೆ ಮರಣವು ಸಂಭವಿಸಬಹುದೆಂಬ ವಿಷಯವನ್ನು ತಿಳಿದಿಲ್ಲ. ಇದು ಬುದ್ಧಿಗೆ ಎಟಕುವಂತದ್ದಲ್ಲ. ಇದು ಸೂಕ್ಷ್ಮದ ವಿಚಾರವಾಗಿದೆ. ಹಾಗೂ ಇದರಿಂದಾಗುವ ನಷ್ಟಗಳೆಲ್ಲಾ ಸೂಕ್ಷ್ಮದಲ್ಲಿ ಉಂಟಾಗುವವು!

## ಪ್ರಥಮವಾಗಿ ಪ್ರಕಾಶವಾಯಿತು ಈ ಸೂತ್ರ

ಒಬ್ಬ ವ್ಯಕ್ತಿಗೆ 1951ನೇ ಇಸವಿಯಲ್ಲಿ, ಈ ಒಂದು ಶಬ್ಧವನ್ನು ನೀಡಲಾಗಿತ್ತು. ಅವನು ನನಗೆ ಈ ಸಂಸಾರದಿಂದ ಪಾರಾಗಲು ದಾರಿ ಕೇಳುತ್ತಿದ್ದ; ಆಗ, ನಾನು ಅವನಿಗೆ 'ಸಂಘರ್ಷಣೆಯನ್ನು ತಪ್ಪಿಸು' ಎಂದು ಹೇಳಿದ್ದೆ ಹಾಗೂ ಅದೇ ರೀತಿಯಾಗಿ ತಿಳುವಳಿಕೆಯನ್ನು ನೀಡಿದ್ದೆ.

ಅದು ಹೇಗಾಯಿತೆಂದರೆ, ನಾನು ಶಾಸ್ತ್ರದ ಪುಸ್ತಕವನ್ನು ಓದುತ್ತಿರುವಾಗ, ಅವನು ನನಗೆ ಬಂದು ಕೇಳುತ್ತಾನೆ, ಏನೆಂದರೆ 'ದಾದಾಶ್ರೀ, ನನಗೆ ಏನಾದರೊಂದು ಜ್ಞಾನವನ್ನು ನೀಡಿ' ಎಂದು. ಅವನು ನನ್ನ ಬಳಿ ಕೆಲಸ ಮಾಡುತ್ತಿದ್ದವನು. ಆಗ ನಾನು ಅವನನ್ನು ಕೇಳಿದೆ. 'ನಿನಗೆ ಯಾವ ಜ್ಞಾನವನ್ನು ಕೊಡುವುದು? ನೀನು ಇಡೀ ಜಗತ್ತಿನೊಂದಿಗೆ ಜಗಳವಾಡಿಕೊಂಡು ಬರುವವನು, ಮಾರಾಮಾರಿ ಮಾಡಿಕೊಂಡು ಬರುವವನು. ರೈಲ್ ನಲ್ಲಿ ಹೊಡೆದಾಟ (ಮಾರಾಮಾರಿ) ಮಾಡುತ್ತೀಯಾ, ಹಣವನ್ನು ನೀರಿನ ಹಾಗೆ ಹರಿಸುತ್ತೀಯಾ, ಅಲ್ಲದೆ ರೈಲ್ವೆ ಕಾಯಿದೆ ಅನುಸಾರ ಹಣ ಕೊಡಬೇಕಾಗಿರುವುದನ್ನು ಕೊಡದೆ ಅದರ ಮೇಲೆ ಜಗಳವಾಡಿಕೊಂಡು ಬರುತ್ತಿಯ, ಇದೆಲ್ಲಾ ನನಗೆ ಗೊತ್ತಿದೆ.'

ಮತ್ತೆ ನಾನು ಅವನಿಗೆ ಹೇಳಿದೆ, 'ನಿನಗೆ ಹೇಳಿಕೊಟ್ಟು ಏನು ಮಾಡುವುದು, ನೀನಂತೂ ಎಲ್ಲರೊಂದಿಗೆ ಜಗಳವಾಡುತ್ತಲೇ ಇರುವುದಲ್ಲವೇ?' ಆಗ ನನಗೆ ಹೇಳುತ್ತಾನೆ, 'ದಾದಾಶ್ರೀ, ನೀವು ಯಾವ ಜ್ಞಾನವನ್ನು ಎಲ್ಲರಿಗೂ ಹೇಳುವಿರೋ, ಅದನ್ನು ನನಗೂ ಸ್ವಲ್ಪ ಕಲಿಸಿಕೊಡಿ' ಎಂದು. ನಾನು ಕೇಳಿದೆ, 'ನಿನಗೆ ಕಲಿಸಿಕೊಟ್ಟು ಮಾಡುವುದೇನು? ನೀನಂತೂ ದಿನಾ ಗಾಡಿಯಲ್ಲಿ ಮಾರಾಮಾರಿ, ಬಡಿದಾಟ ಮಾಡಿಕೊಂಡು ಬರುವವನು. ಸರಕಾರಕ್ಕೆ ಹತ್ತು ರೂಪಾಯಿ ಕಟ್ಟಿ ಯಾವ ಸಾಮಾನು ತರಬಹುದೋ ಅದನ್ನು ನೀನು ದುಡ್ಡು ಕೊಡದೆ ಪುಕ್ಕಟೆಯಾಗಿ ತರುವುದಲ್ಲದೆ, ಅಲ್ಲಿಯ ಜನರಿಗೆ ಇಪ್ಪತ್ತು ರೂಪಾಯಿಯ ಚಹಾ-ತಿಂಡಿ ಕೊಡಿಸುತ್ತಿಯ! ಇದರಿಂದ ಆ ಜನರು ಬಹಳ ಖುಷಿಯಾಗಿ ಬಿಡುತ್ತಾರೆ. ಅಂದರೆ, ಅಲ್ಲಿ ಹತ್ತು ರೂಪಾಯಿಯೂ ಉಳಿಸದೆ, ಅದರ ಮೇಲೆ ಇನ್ನೂ ಹತ್ತು ರೂಪಾಯಿ ಹೆಚ್ಚಿಗೆ ಸೇರಿಸಿ ಖರ್ಚು ಮಾಡುವಂತಹ ನೋಬಲ್ (!) ಮನುಷ್ಯ ನೀನು.'

ಇಷ್ಟೆಲ್ಲಾ ಹೇಳಿದರೂ, ಅವನು ಮತ್ತೂ ನನ್ನನ್ನು ಬಿಡದೆ ಕೇಳುತ್ತಾನೆ, 'ಅದೇನೇ ಇರಲಿ, ಈ ಜ್ಞಾನವನ್ನು ನೀವು ನನಗೆ ಸ್ವಲ್ಪ ತಿಳಿಸಿಕೊಡಿ,' ಎಂದು. ಆಗ, ನಾನು ಹೇಳಿದೆ, 'ನೀನು ಹೀಗೆ ದಿನಾಲು ಗಲಾಟೆ ಮಾಡಿಕೊಂಡು ಬಂದರೆ, ಪ್ರತಿ ದಿನ ನನಗೆ ನಿನ್ನನ್ನು ಸಂಭಾಳಿಸುವುದೇ ಆಗುತ್ತದೆ.' ಅದಕ್ಕೆ ಅವನು ಹೇಳಿದ, 'ಆದರೂ, ದಾದಾ ನನಗೆ ಏನೋ ಒಂದು ಸ್ವಲ್ಪ ಜ್ಞಾನವನ್ನು ತಿಳಿಸಿಕೊಡಿ,' ಎಂದು. ಆಗ ನಾನು, 'ಒಂದು ವಾಕ್ಯ ತಿಳಿಸಿ ಕೊಡುತ್ತೇನೆ. ಆದರೆ, ಅದನ್ನು ನೀನು ಪಾಲನೆ ಮಾಡುವದಾದರೆ ಮಾತ್ರ,' ಎಂದು ಹೇಳಿದೆ. ಅವನು ಖಂಡಿತ ಪಾಲಿಸುತ್ತೇನೆಂದ ಮೇಲೆ, ನಾನು ಹೇಳಿದೆ, 'ಯಾರೊಂದಿಗೂ ಸಂಘರ್ಷಣೆಯಲ್ಲಿ ತೊಡಗಿಸಿಕೊಳ್ಳಬೇಡ.' ಆಗ ಅವನು ಹೇಳಿದ, 'ಸಂಘರ್ಷಣೆ ಅಂದರೆ ಏನು? ನನಗೆ ಅರ್ಥವಾಗುವಂತೆ ತಿಳಿಸಿಕೊಡಿ ದಾದಾಶ್ರೀ'. ನಾನು ಹೀಗೆಂದು ಕೇಳಿದೆ, 'ನಾವು ರಸ್ತೆಯಲ್ಲಿ ಸೀದಾ ಹೋಗುವಾಗ ಎದುರಿಗೆ ಕಂಬ ಅಡ್ಡ ಬಂದರೆ, ಅದರ ಪಕ್ಕದಲ್ಲಿ ಜಾಗ ಮಾಡಿಕೊಂಡು ಹೋಗುತ್ತೇವೋ ಇಲ್ಲ ಅದಕ್ಕೆ ಹೊಡೆದುಕೊಂಡು ಹೋಗುತ್ತೇವೋ?' ಅದಕ್ಕೆ ಅವನು, 'ಇಲ್ಲ ಹೊಡೆಯಲು ಹೋದರೆ ನಮ್ಮ ತಲೆಗೆ ಪೆಟ್ಟು ಬೀಳುತ್ತದೆ.' ಎಂದ ಹಾಗೆಯೇ, ಎದುರಿನಿಂದ ಎಮ್ಮೆ ಬರುತ್ತಿದ್ದರೆ, ಅದರ ಪಕ್ಕದಲ್ಲಿ ದಾರಿ ಮಾಡಿಕೊಂಡು ಹೋಗುತ್ತೇವೋ ಇಲ್ಲ ಅದಕ್ಕೆ ಹೊಡೆದುಕೊಂಡು ಹೋಗುತ್ತೇವೋ?' ಅದಕ್ಕೆ ಅವನು ಉತ್ತರಿಸಿದ, ಹೊಡೆದುಕೊಂಡು ಹೋದರೆ, ಅದು ನಮಗೆ ಹಾಯಲು ಬಂದುಬಿಡುತ್ತದೆ. ಆದುದರಿಂದ, ಅದರ ಪಕ್ಕದಿಂದ ಹೋಗಬೇಕಾಗುತ್ತದೆ. ಹಾಗೆಯೇ, ದಾರಿಯಲ್ಲಿ ಹಾವು ಅಡ್ಡ ಬಂದುಬಿಟ್ಟರೆ ಅಥವಾ ಬಂಡೆ ಕಲ್ಲು ಅಡ್ಡ ಇದ್ದರೆ? ಆಗ, ಅದರ ಬದಿಯಿಂದ ಹೋಗಬೇಕಾಗುತ್ತದೆ, ಎಂದು ಹೇಳಿದ. ಆಗ, ನಾನು ಕೇಳಿದೆ, 'ಯಾರಿಗೆ ಬದಿಯಿಂದ ಹೋಗಬೇಕಾಗಿ ಬರುತ್ತದೆ?' 'ನಾವೇ ನೋಡಿಕೊಂಡು

ಹೋಗಬೇಕು', ಎಂದು ಉತ್ತರಿಸಿದ. ಅದಕ್ಕೆ ನಾನು, 'ಯಾಕೆ ನಾವೇ ಹೋಗಬೇಕು?' ಎಂದು ಕೇಳಿದೆ, 'ಅದು, ನಮ್ಮ ಒಳಿತಿಗಾಗಿ, ನಾವು ಹೊಡೆಯಲು ಹೋದರೆ, ನಮಗೆ ಪೆಟ್ಟು ಬೀಳುವುದು,' ಎಂದು. ಆಗ ಅವನಿಗೆ ಹೇಳಿದೆ, 'ಈ ಜಗತ್ತಿನಲ್ಲಿ ಎಷ್ಟೋ ಜನರು ಈ ಬಂಡೆಯ ಹಾಗೆ, ಗೂಳಿಯ ಹಾಗೆ, ಹಸುವಿನ ಹಾಗೆ, ಕೆಲವರು ಮನಷ್ಯರ ಹಾಗೆ, ಕೆಲವರು ಹಾವಿನ ಹಾಗೆ ಮತ್ತು ಎಷ್ಟೋ ಜನರು ಕಂಬದ ಹಾಗೆ, ಎಲ್ಲಾ ಬಗೆಯ ಜನರಿದ್ದಾರೆ. ಅವರೊಂದಿಗೆ ನೀನು ಸಂಘರ್ಷಣೆಗೆ ಒಳಗಾಗದ ಹಾಗೆ ದಾರಿಯನ್ನು ಮಾಡಿಕೊಳ್ಳಬೇಕು.'

ಹೀಗೆ 1951ರಲ್ಲಿ ಅವನಿಗೆ ತಿಳುವಳಿಕೆ ಕೊಟ್ಟಿದ್ದೆ. ಅವನು ಅಂದಿನಿಂದಲೇ ನಾನು ಕೊಟ್ಟ ವಾಕ್ಯವನ್ನು ಬಿಡದೆ ಪಾಲಿಸುವ ಪಟ್ಟುಹಿಡಿದ; ಅದರ ನಂತರ ಅವನು ಯಾರೊಂದಿಗೂ ಸಂಘರ್ಷಣೆಗೆ ಒಳಪಡಲಿಲ್ಲ. ಅವನ ಚಿಕ್ಕಪ್ಪ ಬಹಳ ದೊಡ್ಡ ವ್ಯಾಪಾರಿಯಾಗಿದ್ದರು. ಅವರು ಇವನ ಪರಿವರ್ತನೆಯನ್ನು ಕಂಡು, ಬೇಕೆಂದೇ ಎಷ್ಟೋ ಸಲ ಅವನ್ನನ್ನು ಜಗಳವಾಡುವಂತೆ ಪ್ರಚೋದಿಸಿದರೂ ಅವನು ಮಾತ್ರ ವಿಚಲಿತನಾಗದೆ, ಆ ವಿಚಾರದಿಂದ ನುಸುಳಿಕೊಂಡು ಹೊರಬಂದು ಬಿಡುತ್ತಿದ್ದ. 1951ರ ನಂತರ ಅವನು ಯಾರೊಂದಿಗೂ ಸಂಘರ್ಷಣೆಗೆ ಸಿಲುಕಲಿಲ್ಲ.

## ವ್ಯವಹಾರದಲ್ಲಿಯೂ ತಪ್ಪಿಸಿ ಸಂಘರ್ಷಣೆಯನ್ನು, ಹೀಗೆಯೇ

ನಾವು ರೈಲು ಗಾಡಿಯಿಂದ ಕೆಳಗೆ ಇಳಿದ ತಕ್ಷಣ ಕೂಲಿಯವರು ಬೊಬ್ಬೆ ಹಾಕಲು ಪ್ರಾರಂಭಿಸುತ್ತಾರೆ. ಒಬ್ಬರ ಮೇಲೆ ಒಬ್ಬರು ಬಂದು ಬಿಡುತ್ತಾರೆ. ನಮ್ಮ ಸಾಮಾನನ್ನು ಹೊತ್ತುಕೊಂಡು ಹೊರಗೆ ಬಂದ ಮೇಲೆ ಅವನು ಹೆಚ್ಚು ಕೇಳಿದರೆ, ಅವನೊಂದಿಗೆ ಗಲಾಟೆ ಮಾಡಿ, ಸ್ಟೇಷನ್ ಮಾಸ್ಟರ್ ನ ಕರೆಯುವೆ. 'ಅಷ್ಟೊಂದು ಹಣ ಯಾರಾದರೂ ಕೇಳುತ್ತಾರೆಯೇ? ನೀನು ಹಾಗೆ, ನೀನು ಹೀಗೆ..,' ಎಂದು ರೇಗಾಡುತ್ತೇವೆ. ಅಯ್ಯೋ ಮೂಢ, ಅಲ್ಲಿ ಹಾಗೆಲ್ಲಾ ಜಗಳ ಮಾಡಲು ಹೋಗಬೇಡ. ಅವನು 50 ರೂಪಾಯಿ ಕೇಳಿದರೆ, ಅವನ್ನನ್ನು ಪುಸಲಾಯಿಸಿ ಹೇಳಬೇಕು, 'ನೋಡು, ನಿಜವಾಗಿ ಹತ್ತು ರೂಪಾಯಿ ಆಗುತ್ತದೆ. ಆದರೆ, ಈಗ ಇಪ್ಪತ್ತು ರೂಪಾಯಿ ಕೊಡುತ್ತೇನೆ ತೆಗೆದು ಕೊಂಡುಹೋಗು' ನಮಗೆ ಗೊತ್ತಾಗಿದೆ ನಾವು ಅವನ ಜೊತೆ ಸಿಕ್ಕಿಕೊಂಡಿದ್ದೇವೆ ಎಂದು. ಹಾಗಾಗಿ, ಹೆಚ್ಚು-ಕಡಿಮೆ ಮಾಡಿ ಅವನಿಂದ ಬಿಡಿಸಿಕೊಳ್ಳಬೇಕು. ಅಲ್ಲಿ ಸಂಘರ್ಷಣೆಗೆ ಮುಂದಾಗಬಾರದು. ಮತ್ತೆ ಅವನು ತುಂಬಾ ಗಲಾಟೆಗೆ ನಿಂತು ಬಿಡುತ್ತಾನೆ. ಮೊದಲೇ ಅವನು ಮನೆಯಲ್ಲಿ ಜಗಳವಾಡಿಕೊಂಡು ಬಂದಿರುತ್ತಾನೆ, ಅದರ ಜೊತೆಗೆ ಸ್ಟೇಷನ್ನಲ್ಲಿ ನಾವು ಕಿರಿ ಕಿರಿ ಮಾಡಿದರೆ, ಗೂಳಿಯ ಹಾಗೆ ಹಾಯಲು ಬಂದುಬಿಡುತ್ತಾನೆ. ಮೂವತ್ತೈದು ಅಂಕ ಪಡೆದು ಮನುಷ್ಯನಾಗಿದ್ದಾನೆ, ಇನ್ನೂ ಅವನಲ್ಲಿ ಅರವತ್ತೈದು ಅಂಕದಷ್ಟು ಗೂಳಿಯ ಗುಣವಿರುತ್ತದೆ!

ಯಾರಾದರು ಜಗಳವಾಡಲು ಪ್ರಾಂಭಿಸಿದಾಗ, ಅವರ ಶಬ್ಧಗಳು ಸಿಡಿಮದ್ದಿನ ಹಾಗೆ ಬರುತ್ತಿದ್ದಾಗ, ನಮ್ಮಲ್ಲಿ ಆ ಸಂಘರ್ಷಣೆಯನ್ನು ತಪ್ಪಿಸಬೇಕೆಂಬ ಅರಿವು ಇದ್ದರೆ, ಆಗ ನಮ್ಮ ಮನಸ್ಸಿನ ಮೇಲೆ ಯಾವುದೇ ಪರಿಣಾಮವು ಬೀರುವುದಿಲ್ಲ, ಆದರೂ ಕೆಲವೊಮ್ಮೆ ನಮ್ಮ ಮನಸ್ಸಿನ ಮೇಲೆ ತುಸು ಪರಿಣಾಮ ಉಂಟಾದರೆ, ನಾವು ತಿಳಿಯಬೇಕು ಎದುರಿನವರ ಮನಸ್ಸು ನಮ್ಮ ಮೇಲೂ ಪ್ರಭಾವವು ಬೀರುತ್ತಿದೆ ಎಂದು; ಆಗ ನಾವು ಅಲ್ಲಿಂದ ಜಾರಿಕೊಳ್ಳಬೇಕು. ಇವೆಲ್ಲವೂ ಸಂಘರ್ಷಣೆಯೇ ಆಗಿದೆ. ಇದನ್ನು ಎಷ್ಟರಮಟ್ಟಿಗೆ ಅರ್ಥಮಾಡಿಕೊಳ್ಳುತ್ತಾ ಹೋಗುತ್ತೇವೋ ಅಷ್ಟರ ಮಟ್ಟಿಗೆ ಸಂಘರ್ಷಣೆಗಳು ದೂರವಾಗುತ್ತವೆ. ಸಂಘರ್ಷಣೆಯನ್ನು ತಪ್ಪಿಸುವುದರಿಂದಲೇ ಮೋಕ್ಷವು ಪ್ರಾಪ್ತಿಯಾಗುವುದು.

ಈ ಜಗತ್ತು ಸಂಘರ್ಷಣೆಯೇ ಆಗಿದೆ. ಸ್ಪಂದನಗಳ ಸ್ವರೂಪವಾಗಿದೆ. ಹಾಗಾಗಿ ಸಂಘರ್ಷಣೆಯನ್ನು ತಪ್ಪಿಸಬೇಕು. ಸಂಘರ್ಷಣೆಯಿಂದಾಗಿಯೇ ಈ ಜಗತ್ತು ಎದ್ದು ನಿಂತಿರುವುದು. ಇದನ್ನು ಭಗವಾನ್ ಮಹಾವೀರರು 'ವೈಮನಸ್ಸಿನಿಂದ ಉಂಟಾಗಿರುವುದು' ಎಂದು ಹೇಳಿದ್ದಾರೆ. ಪ್ರತಿಯೊಬ್ಬ ಮನುಷ್ಯನು, ಅಲ್ಲದೆ, ಪ್ರತಿಯೊಂದು ಜೀವಿಯು ವೈರವನ್ನು ಬೆಳೆಸಿಕೊಳ್ಳುತ್ತದೆ. ಸಂಘರ್ಷಣೆಗಳು ಹೆಚ್ಚಾದಷ್ಟು ವೈರವನ್ನು ಇಟ್ಟುಕೊಳ್ಳದೆ ಬಿಡುವುದಿಲ್ಲ. ಅದು, ಹಾವಾಗಿರಬಹುದು, ಚೇಳಾಗಿರಬಹುದು, ಎಮ್ಮೆಯಾಗಿರಬಹುದು, ಗೂಳಿಯಾಗಿರಬಹುದು, ಅಥವಾ ಇನ್ನು ಬೇರೆ ಯಾವುದೇ ಜೀವಿಯಾಗಿದ್ದರೂ ಹಗೆತನವನ್ನು ಬೆಳೆಸಿಕೊಳ್ಳದೆ ಬಿಡುವುದಿಲ್ಲ. ಯಾಕೆಂದರೆ, ಎಲ್ಲದರಲ್ಲಿಯೂ ಆತ್ಮದ ವಾಸ್ತವ್ಯವಿದೆ ಮತ್ತು ಆತ್ಮ ಶಕ್ತಿಯು ಎಲ್ಲರಲ್ಲಿಯೂ ಸಮಾನವಾಗಿಯೇ ಇರುವುದಾಗಿದೆ. ಆದರೆ, ಈ 'ಪುದ್ಗಲ್'ನ ದೌರ್ಬಲ್ಯದಿಂದಾಗಿ ಸಂಘರ್ಷಣೆಗಳನ್ನು ಸಹಿಸಿ ಕೊಳ್ಳಬೇಕಾಗಿದೆ. ಈ ಸೈರಣೆಯನ್ನು ಮಾಡಿಕೊಳ್ಳುವುದರ ಜೊತೆಗೆ, ವೈರತ್ವವನ್ನು ಕಟ್ಟಿಕೊಳ್ಳದೆ ಬಿಡುವುದಿಲ್ಲ ಹಾಗು ಮುಂದಿನ ಜನ್ಮದಲ್ಲಿ ಅದೇ ವೈರತ್ವವು ಮರುಕಳಿಸುವುದು!

ಯಾವುದೇ ವ್ಯಕ್ತಿಯು ಎಷ್ಟೇ ಮಾತನಾಡಿದರೂ ಹಾಗೂ ಅವನು ಹೇಗೇ ಮಾತನಾಡಿದರೂ, ನಾವು ಜಗಳ ಮಾಡಲು ಹೋಗದೆ ಇರುವುದೇ ಧರ್ಮ. ಹೌದು, ಹೇಳುವವರು ಏನು ಬೇಕಾದರು ಹೇಳಲಿ, ಅಲ್ಲಿ ಇಂತಹದ್ದೇ ಮಾತುಗಳಿಗೆ 'ಜಗಳಮಾಡಲೇ ಬೇಕು' ಎನ್ನುವ ಷರತ್ತುಗಳು ಏನಾದರೂ ಇದೆಯೇ? ಬೆಳಗಾಗುವವರೆಗೂ ಜಗಳವಾಡುತ್ತಲೇ ಇರುತ್ತಾರೆ, ಅಂತಹ ಜನರು! ಅಲ್ಲದೆ, ನಮ್ಮಿಂದ ಎದುರಿನವರಿಗೆ ದುಃಖವಾಗುವಂತಹ ಮಾತುಗಳನ್ನು ಆಡುವುದು ಬಹಳ ದೊಡ್ಡ ತಪ್ಪು. ಇನ್ನು ಪ್ರತಿಯಾಗಿ ಬೇರೆಯವರೇ ಏನಾದರು ಹೇಳಿದಾಗ, ಅದನ್ನು ಅಲ್ಲಿಗೆ ಬಿಟ್ಟುಬಿಡುವವರನ್ನು ಮನುಷ್ಯರೆಂದು ಕರೆಯಲಾಗುತ್ತದೆ.

# ಸಹನೆ? ಬೇಡ; ಸೊಲ್ಯೂಷನ್ ಕಂಡುಕೊಳ್ಳಿ

**ಪ್ರಶ್ನಕರ್ತ:** ದಾದಾ, 'ಸಂಘರ್ಷಣೆಯನ್ನು ತಪ್ಪಿಸಿ' ಎಂದು ಏನು ನೀವು ಹೇಳುತ್ತೀರಲ್ಲ, ಹಾಗೆಂದರೆ ಸಹನೆಯಿಂದ ಬೇಕೆನ್ನುವ ಅರ್ಥವಲ್ಲವೇ?

**ದಾದಾಶ್ರೀ:** 'ಸಂಘರ್ಷಣೆಯನ್ನು ತಪ್ಪಿಸಿ' ಎಂದರೆ ಸಹಿಸಿಕೊಳ್ಳುವುದಲ್ಲ. ಸಹಿಸಿಕೊಳ್ಳುವುದಾದರೆ, ಎಷ್ಟು ಸಹಿಸಿಕೊಳ್ಳಬಹುದು? ಸಹನೆಯಿಂದ ಇರುವುದು ಹಾಗು 'ಕಬ್ಬಿಣದ ಸ್ಪ್ರಿಂಗ್' ಅನ್ನು ಒತ್ತಿಹಿಡಿಯುವುದು, ಈ ಎರಡು ಒಂದೇ ರೀತಿಯದ್ದಾಗಿದೆ. ಒತ್ತಿಹಿಡಿದ 'ಸ್ಪ್ರಿಂಗ್' ಎಷ್ಟು ಸಮಯದವರೆಗೆ ಹಾಗೆಯೇ ಇರಲು ಸಾಧ್ಯವಾಗುತ್ತದೆ? ಆದುದರಿಂದ, ಸಹನೆಯಿಂದ ಇರುವುದನ್ನು ಕಲಿಯುವುದೇ ಬೇಡ, 'ಸೊಲ್ಯೂಷನ್' ಕಂಡುಕೊಳ್ಳುವುದನ್ನು ಕಲಿಯಬೇಕು. ಅಜ್ಞಾನದ ಸ್ಥಿತಿಯಲ್ಲಿ ಸಹನೆಯಿಂದ ಇರಲು ಪ್ರಯತ್ನಿಸುತ್ತೇವೆ. ಆದರೆ, ಅದು ಒತ್ತಿಹಿಡಿದ 'ಸ್ಪ್ರಿಂಗ್'ನ ಹಾಗೆ ಅದೊಂದು ಒಂದು ದಿನ ಹಿಡಿತ ಮೀರಿ ಹಾರಿದರೆ ಎಲ್ಲವನ್ನು ಬೀಳಿಸಿಬಿಡಿತ್ತದೆ; ಅದು ಸಹ ಪ್ರಕೃತಿಯ ನಿಯಮವೇ ಆಗಿದೆ.

ಜಗತ್ತಿನಲ್ಲಿ ಅಂತಹ ಯಾವುದೇ ಕಾನೂನು ಇಲ್ಲ, ನಾವು ಬೇರೆಯವರಿಗಾಗಿ ಸಹನೆಯಿಂದ ಇರಬೇಕು ಎಂದು; ಬೇರೆಯವರ ನಿಮಿತ್ತದಿಂದಾಗಿ ಸಹನೆಯಿಂದ ಇರಬೇಕಾಗಿ ಬಂದರೂ, ಅದು ನಮ್ಮ ಲೆಕ್ಕದೇ ಆಗಿರುತ್ತದೆ. ಆದರೆ, ನಮಗೆ ಅದು ಯಾವ ಲೆಕ್ಕಾಚಾರದ್ದಾಗಿದೆ, ಎಲ್ಲಿಯ ಮಾಲು ಎಂಬುದು ಅರ್ಥವಾಗುವುದಿಲ್ಲ. ಹಾಗಾಗಿ ನಾವು ಏನು ತಿಳಿಯುತ್ತೇವೆ ಎಂದರೆ, ನಮಗೆ ಹೊಸದಾಗಿ ಮಾಲನ್ನು ಕೊಡಲು ಬಂದಿದ್ದಾರೆ ಎಂದು. ಇಲ್ಲಿ ಹೊಸದಾಗಿ ಯಾರೂ ಕೊಡಲು ಬರುವುದಿಲ್ಲ, ಕೊಟ್ಟದ್ದು ವಾಪಸು ಬರುತ್ತದೆ. ನಮ್ಮ ಜ್ಞಾನದಲ್ಲಿ ಸಹನೆಯಿಂದ ಇರಬೇಕೆಂದು ಎಲ್ಲಿಯೂ ಇಲ್ಲ. ಜ್ಞಾನದಿಂದ ಪರಿಶೀಲನೆಯನ್ನು ಮಾಡಿ, ಎದುರಿನವರು ಕೂಡಾ 'ಶುದ್ಧಾತ್ಮ' ಹಾಗು ಹೀಗೆಲ್ಲಾ ನಡೆಯುತ್ತಿರುವುದು ನನ್ನದೇ ಉದಯ ಕರ್ಮದಿಂದಾಗಿದೆ, ಎದುರಿನವರು ಇದಕ್ಕೆಲ್ಲ ನಿಮಿತ್ತರಾಗಿದ್ದಾರೆ ಎಂದು ಅರಿವಾದಾಗ, ನಮ್ಮ ಈ 'ಜ್ಞಾನವೇ' ಪಜ್ಜಲ್ ಸಾಲ್ವ್ ಮಾಡಿಬಿಡುತ್ತದೆ.

**ಪ್ರಶ್ನಕರ್ತ:** ಅಲ್ಲಿಗೆ ಅದರ ಅರ್ಥವೇನೆಂದರೆ, ಈ ಮಾಲು ನನ್ನದೇ ಆಗಿತ್ತು, ಹಾಗಾಗಿ ಹಿಂದಿರುಗಿ ಬಂದಿದೆ ಎಂದು ಮನಸ್ಸಿನಲ್ಲಿ ಸಮಾಧಾನ ಮಾಡಿಕೊಳ್ಳಬೇಕೇ?

**ದಾದಾಶ್ರೀ:** ಅವರು 'ಶುದ್ಧಾತ್ಮ' ಹಾಗೂ ಅದು ಅವರ ಪ್ರಕೃತಿಯಾಗಿದೆ. ಪ್ರಕೃತಿಯು ಫಲ ನೀಡುತ್ತಿರುವುದಾಗಿದೆ. ನಾವೂ ಶುದ್ಧಾತ್ಮ ಹಾಗೂ ಎದುರಿನವರೂ ಶುದ್ಧಾತ್ಮ ಆಗಿರುವಾಗ, ಇಬ್ಬರ ಪ್ರಕೃತಿಯು ಒಂದಕ್ಕೊಂದು ಬರಬೇಕಾಗಿದ್ದ ಬಾಕಿಯನ್ನು ಎದುರಾಗಿ ಚುಕ್ತಾ ಮಾಡಿ

ಕೊಳ್ಳುವುದಾಗಿದೆ. ಒಂದು ಪ್ರಕೃತಿಯ ಉದಯ ಕರ್ಮದ ಅನುಗುಣವಾಗಿ ಮತ್ತೊಂದು ಪ್ರಕೃತಿಯು ಎದುರಾಗಿ ಬರುತ್ತದೆ. ಆದುದರಿಂದ ನಾವು ಹೇಳುವುದೇನೆಂದರೆ, ನಮ್ಮದೇ ಕರ್ಮದ ಉದಯವಾಗಿದೆ, ಅದಕ್ಕೆ ಎದುರಿನವರು ನಿಮಿತ್ತರಾಗಿದ್ದಾರೆ. ಅವರು ಕೊಟ್ಟು ಹೋದರೆಂದರೆ ಅಲ್ಲಿಗೆ ನಮ್ಮ ಲೆಕ್ಕಾಚಾರ ಚುಕ್ತವಾಯಿತು ಎಂದು; ಇದು 'ಸೊಲ್ಯೂಷನ್' ಆಗಿದೆ. ಇದರಲ್ಲಿ ಎಲ್ಲಿಯೂ ಸಹನೆ ಮಾಡಬೇಕಾಗಿಯೇ ಇಲ್ಲವಲ್ಲ!

ಹೀಗೆ ಯಾವುದನ್ನೂ ಸರಿಯಾಗಿ ಅರ್ಥಮಾಡಿಕೊಳ್ಳದೆ ಸುಮ್ಮನೆ ಸಹನೆ ಮಾಡುವುದರಿಂದ ಏನಾಗುತ್ತದೆ? ಎಂದಾದರೊಂದು ದಿನ ಆ ಸ್ಪ್ರಿಂಗ್ ಮೇಲೆ ಹಾರುತ್ತದೆ. ಸ್ಪ್ರಿಂಗ್ ಮೇಲೆ ಹಾರುವುದನ್ನು ನೋಡಿದ್ದೀರಾ? ನಮ್ಮ ಸ್ಪ್ರಿಂಗ್ ಕೂಡಾ ಬಹಳ ಹಾರುತ್ತಿತ್ತು. ತುಂಬಾ ದಿನಗಳವರೆಗೆ ಸಹನೆ ಮಾಡಿಕೊಂಡಿದ್ದು ಮತ್ತೆ ಒಂದು ದಿನ ಮೇಲೆ ಜಿಗಿದು ಎಲ್ಲವನ್ನು ಚೆಲ್ಲಾಪಿಲ್ಲಿ ಮಾಡಿಬಿಡುತ್ತಿತ್ತು. ಇದೆಲ್ಲಾ ಅಜ್ಞಾನದ ಸ್ಥಿತಿಯಲ್ಲಿ ಇದ್ದಾಗ ಆಗಿರುವುದು, ಅದು ನನಗೆ ನೆನಪಿದೆ. ಅದು ನನ್ನ ಲಕ್ಷ್ಯೆಯಲ್ಲಿ ಇದೆ. ಆದುದರಿಂದ ನಾನು ಹೇಳುತ್ತಿರುವುದು, ಸಹನೆ ಮಾಡುವುದನ್ನು ಕಲಿಯಬೇಡಿ. ಈ ಅಜ್ಞಾನದಲ್ಲಿ ಇರುವಾಗ ಸಹನೆ ಮಾಡಿಕೊಳ್ಳಬೇಕು ಎನ್ನುವುದು ಇರುತ್ತದೆ. ಆದರೆ ನಮ್ಮಲ್ಲಿ ಅದರಿಂದಾಗುವ ಪರಿಣಾಮವೇನು, ಅದರ ಕಾರಣಗಳು ಏನು, ಎನ್ನುವುದನ್ನು ಪುಸ್ತಕದಲ್ಲಿ (ಲೆಕ್ಕಾಚಾರದಿಂದ) ಚೊಕ್ಕವಾಗಿ ನೋಡಿಕೊಳ್ಳಬಹುದಾಗಿದೆ. ಯಾವುದೂ ಪುಸ್ತಕದಿಂದ ಹೊರತಾಗಿ ನಡೆಯುವುದಿಲ್ಲ.

## ಸಂಘರ್ಷಣೆಯು, ನಮ್ಮದೇ ದೋಷವಾಗಿದೆ

ಈ ಜಗತ್ತಿನಲ್ಲಿ ಯಾವುದೇ ಸಂಘರ್ಷಣೆಗೆ ಒಳಗಾದರೆ, ಅದು ನಿಮ್ಮದೇ ದೋಷದಿಂದಾಗಿದೆ, ಎದುರಿನವರು ದೋಷಿಗಳಲ್ಲ. ಅಲ್ಲಿ, ಎದುರಿನವರಂತೂ ಜಗಳವಾಡದೆ ಬಿಡುವುದಿಲ್ಲ. ಆದರೆ 'ನೀವು ಯಾಕೆ ಜಗಳವಾಡಲು ಹೋಗಬೇಕು?' ಎಂದಾಗ ಹೇಳುತ್ತಾರೆ, 'ಮೊದಲಿಗೆ ಅವರೇ ಜಗಳವಾಡಲು ಬಂದರು,' ಆದುದರಿಂದ, ಜಗಳವಾಡ ಬೇಕಾಯಿತು; ಹಾಗಾದರೆ, ನೀವೂ ಕುರುಡರು ಮತ್ತು ಅವರೂ ಕುರುಡರು ಎಂದಾಯಿತು.

**ಪ್ರಶ್ನಕರ್ತ:** ಸಂಘಷಣೆಯಲ್ಲಿ, ಸಂಘರ್ಷಣೆಯನ್ನು ಮಾಡಿಕೊಳ್ಳುತ್ತಾ ಹೋದರೆ ಏನಾಗುತ್ತದೆ?

**ದಾದಾಶ್ರೀ:** ತಲೆಹೊಡೆದು ಬಿಡುತ್ತದೆ! ಆದುದರಿಂದ ಸಂಘರ್ಷಣೆಯ ಸಮಯದಲ್ಲಿ ನಾವು ಏನು ತಿಳಿದುಕೊಳ್ಳಬೇಕು?

**ಪ್ರಶ್ನಕರ್ತ:** ನಮ್ಮದೇ ತಪ್ಪಿನಿಂದ್ದಾಗಿದೆ ಎಂದು ಅರಿತುಕೊಳ್ಳಬೇಕು.

**ದಾದಾಶ್ರೀ:** ಹೌದು, ಹಾಗೂ ಅಲ್ಲಿ ತಕ್ಷಣವೇ ಅಡ್ಜಸ್ಟ್ (ಹೊಂದಾಣಿಕೆ) ಮಾಡಿಕೊಂಡುಬಿಡಬೇಕು. ಸಂಘರ್ಷಣೆ ಸಂಭವಿಸಿತೆಂದರೆ, ಆಗ ನಾವು ತಿಳಿಯಬೇಕು, 'ನಾವು ಮಾತನಾಡಿರುವ ರೀತಿಯಲ್ಲಿ ಏನೋ ತಪ್ಪಾಗಿರುವುದರ ಕಾರಣದಿಂದ ಈ ಸಂಘರ್ಷಣೆಯು ಉಂಟಾಗಿದೆ'. ತನ್ನಯ ತಪ್ಪು ಅನಾವರ್ಣಗೊಂಡು ಪರಿಹಾರ ಸಿಕ್ಕಿತ್ತೆಂದರೆ, ಆಮೇಲೆ Puzzle solve ಆಗಿಬಿಡುತ್ತದೆ. ಅಲ್ಲದೆ, ನಾವು 'ಎದುರಿನವರದ್ದೇ ತಪ್ಪು,' ಎಂದುಕೊಂಡು ಹುಡುಕುತ್ತಲೇ ಹೋದರೆ ಎಂದಿಗೂ ಆ Puzzle solve ಆಗುವುದೇಯಿಲ್ಲ. 'ನಮ್ಮದೇ ತಪ್ಪೆಂದು ಕೊಂಡಾಗ,' ಮಾತ್ರ ಈ ಜಗತ್ತಿನಿಂದ ಬಿಡುಗಡೆ ಸಿಗುತ್ತದೆ, ಅದುಬಿಟ್ಟು ಬೇರೆ ಯಾವ ಉಪಾಯವೂ ಇಲ್ಲ. ಇನ್ನೆಲ್ಲಾ ಉಪಾಯಗಳು ಗೊಂದಲಕ್ಕೆ ಸಿಕ್ಕಿಹಾಕಿಸುತ್ತವೆ ಹಾಗೂ ಉಪಾಯವನ್ನು ಮಾಡಲುಹೋಗುವುದು ಯಾವುದೆಂದರೆ, ಅದು ನಮ್ಮೊಳಗೆಯೇ ಕಾಣದೆ ಇರುವಂತಹ ಅಹಂಕಾರವಾಗಿದೆ. ಆದುದರಿಂದ ಉಪಾಯವನ್ನು ಹುಡುಕಲು ಯಾಕಾಗಿ ಹೋಗಬೇಕು? ಎದುರಿನವರು ನಮ್ಮ ತಪ್ಪನ್ನು ಎತ್ತಿತೋರಿಸಿದರೆ, ಆಗ ನಾವೇ ಹೇಳಿಬಿಡಬೇಕು 'ನಾನು ಮೊದಲಿಂದಲೂ ದಡ್ಡ' ಎಂದು.

ಬುದ್ಧಿಯೇ ಸಂಸಾರದಲ್ಲಿನ ಹೊಡೆದಾಟಕ್ಕೆ ಕಾರಣವಾಗಿದೆ. ಅರೇ, ಒಂದು ಹೆಣ್ಣಿನ ಮಾತನ್ನು ಕೇಳಿಕೊಂಡು ನಡೆಯಲು ಹೋಗಿಯೇ ಬೀಳಲಾಗುತ್ತದೆ, ಹೊಡೆದಾಟವಾಗುತ್ತದೆ. ಇನ್ನು, ಇದು ಬುದ್ಧಿ ಎಂಬ ಸಹೋದರಿ! ಅದು ಹೇಳಿದ ಹಾಗೆ ಕೇಳುತ್ತಾ ಹೋದರೆ, ಎಲ್ಲಿಂದ ಎಲ್ಲಿಗೋ ಎಸೆದು ಬಿಡುತ್ತದೆ! ಅಲ್ಲದೆ, ರಾತ್ರಿ ಎರಡು ಗಂಟೆಯಾಗಿರಲಿ ನಮ್ಮನ್ನೆಬ್ಬಿಸಿ ಅನುಚಿತವಾದ ವಿಚಾರಗಳನ್ನು ತೋರಿಸುತ್ತದೆ; ಈ ಬುದ್ಧಿ ಎಂಬ ಸಹೋದರಿ! ಹೆಂಡತಿಯಾದರೂ ಸ್ವಲ್ಪ ಸಮಯದವರೆಗೆ ಮಾತ್ರ ಒಟ್ಟಿಗಿರುತ್ತಾಳೆ, ಆದರೆ ಈ ಬುದ್ಧಿ ಎಂಬ ಸಹೋದರಿ ಸದಾ ಕಾಲ ಜೊತೆ ಜೊತೆಯಾಗಿಯೇ ಇರುತ್ತಾಳೆ. ಈ ಬುದ್ಧಿ ಎನ್ನುವುದು 'dethrone' ಮಾಡಿಸಿ (ಸ್ಥಾನದಿಂದ ಕೆಳಗಿಳಿಸಿ) ಬಿಡುವುದಾಗಿದೆ.

ನಿಮಗೆ ಮೋಕ್ಷಕ್ಕೆ ಹೋಗಲೇ ಬೇಕೆಂದಿದ್ದರೆ, ಬುದ್ಧಿಯ ಹೇಳಿಕೆಯನ್ನು ಸ್ವಲ್ಪವೂ ಕೇಳಬಾರದು. ಈ ಬುದ್ಧಿ ಹೇಗೆಂದರೆ, ಜ್ಞಾನಿ ಪುರುಷರಲ್ಲಿಯೂ ಅನುಚಿತವನ್ನು ತೋರಿಸುತ್ತದೆ. 'ಅಯ್ಯೋ ಮೂರ್ಖ, ನಿನ್ನ ಮೋಕ್ಷದ ಪ್ರಾಪ್ತಿಯು ಅವರಿಂದಲೇ ಆಗಬೇಕಾಗಿರುವಾಗ, ಅಂತಹವರ ಬಗ್ಗೆ ಯೋಗ್ಯವಲ್ಲದ್ದನ್ನು ತೋರಿಸುವುದು ಸರಿಯೇ? ಇದರಿಂದಾಗಿ ನೀನು ಅನಂತ ಅವತಾರಗಳವರೆಗೆ ಮೋಕ್ಷದಿಂದ ದೂರ ಉಳಿಯಬೇಕಾಗುತ್ತದೆ'!

ಸಂಘರ್ಷಣೆಯೇ ನಮ್ಮ ಅಜ್ಞಾನವಾಗಿದೆ. ಯಾರೊಂದಿಗಾದರೂ ಸಂಘರ್ಷಣೆಗೆ ಒಳಗಾಗುವುದು, ನಮ್ಮ ಅಜ್ಞಾನದ ನಿಶಾನಿಯಾಗಿದೆ. ಈ ಸರಿ-ತಪ್ಪುಗಳನ್ನು ಭಗವಂತನು

ನೋಡುವುದೇ ಇಲ್ಲ. ಭಗವಂತನು, 'ನೀನು ಏನು ಬೇಕಾದರೂ ಮಾತನಾಡು, ಆದರೆ ಎಲ್ಲಿಯೂ ಸಂಘರ್ಷಣೆಯನ್ನು ಮಾಡಲು ಹೋಗಲಿಲ್ಲ ಆಲ್ಲವೇ?' ಎಂದು ಕೇಳಿದಾಗ, 'ಇಲ್ಲ' ಎಂದರೆ ಸಾಕು; ಅಷ್ಟೇ ಬೇಕಾಗಿರುವುದು. ಈ ಸರಿ-ತಪ್ಪುಗಳನ್ನು ಭಗವಂತನು ನೋಡಲು ಹೋಗುವುದಿಲ್ಲ. ಇದೆಲ್ಲಾ ಈ ಜನರು ಮಾಡಿಕೊಂಡಿರುವುದಾಗಿದೆ. ಭಗವಂತನ ಬಳಿಯಲ್ಲಿ ದ್ವಂದ್ವವೇ ಇರುವುದಿಲ್ಲ!

## ಸಂಘರ್ಷಗಳೆಲ್ಲಾ ಗೋಡೆಗಳೇ

ನಾವು ಗೋಡೆಗೆ ಹೊಡೆದುಕೊಂಡರೆ, ಅದು ಗೋಡೆಯ ತಪ್ಪೋ ಅಥವಾ ನಮ್ಮ ತಪ್ಪೋ? ಗೋಡೆಗೆ ದಾರಿ ಬಿಡು, ದಾರಿ ಬಿಡು, ಎಂದು ಅದರ ಜೊತೆಯಲ್ಲಿ ವಾದಮಾಡಿ, ನ್ಯಾಯ ಕೇಳಲಾಗುವುದೇ? ಅಲ್ಲದೆ, 'ನಾವು ಅಲ್ಲಿಂದಲೇ ಹೋಗಬೇಕು' ಎಂದು ಹೇಳುವುದು ಸರಿಯೇ? ಆಗ, ಅಲ್ಲಿ ಯಾರ ತಲೆಗೆ ಪೆಟ್ಟುಬೀಳುತ್ತದೆ?

**ಪ್ರಶ್ನಕರ್ತ:** ನಮ್ಮ ತಲೆಗೇ ಪೆಟ್ಟು.

**ದಾದಾಶ್ರೀ:** ಹಾಗಾದರೆ ಯಾರು ಎಚ್ಚರಿಕೆಯನ್ನು ವಹಿಸಬೇಕು? ಅಲ್ಲಿ ಗೋಡೆಯ ತಪ್ಪೇನಾದರೂ ಇದೆಯೇ? ಇದರಲ್ಲಿ ತಪ್ಪು ಯಾರದ್ದು? ಯಾರಿಗೆ ಪೆಟ್ಟುಬಿತ್ತೋ ಅವನದ್ದೇ ತಪ್ಪು. ಅಂದರೆ, ಗೋಡೆಯ ಹಾಗೆ ಈ ಜಗತ್ತು!

ಗೋಡೆಗೆ ಹೊಡೆದು ಕೊಂಡಾಗ, ಅದರೊಂದಿಗೆ ಭೇದಭಾವವನ್ನು ಮಾಡುವುದು ಸರಿಯೇ? ಯಾವಾಗಾದರೂ ನೀವು ಗೋಡೆಗಾಗಲಿ ಅಥವಾ ಬಾಗಿಲಿಗಾಗಲಿ ಹೊಡೆದುಕೊಂಡಾಗ ಅಲ್ಲಿ ಗೋಡೆಯೊಂದಿಗೆ ಅಥವಾ ಬಾಗಿಲಿನೊಂದಿಗೆ ಭೇದಭಾವವು ಉಂಟಾಗಿದೆಯೇ?

**ಪ್ರಶಕರ್ತ:** ಆ ಬಾಗಿಲು ಅದು, ನಿರ್ಜೀವವಾದ ವಸ್ತುವಾಗಿದೆಯಲ್ಲ?

**ದಾದಾಶ್ರೀ:** ಅಂದರೆ ಜೀವಂತವಾಗಿರುವವಲ್ಲಿ ಮಾತ್ರ ನೀವು ಹಾಗೆ ತಿಳಿಯುವುದಾಗಿದೆ, ಅವರು ನನ್ನೊಂದಿಗೆ ಜಗಳವಾಡಿದರು ಎಂದು. ಈ ಜಗತ್ತಿನಲ್ಲಿ ಯಾವುದರೊಂದಿಗೆಲ್ಲಾ ಸಂಘರ್ಷಣೆಯಾಗುತ್ತದೆಯೋ, ಅವೆಲ್ಲವೂ ನಿರ್ಜೀವವಾದ ವಸ್ತುಗಳೇ ಆಗಿವೆ. ತಾಗಿಸಿಕೊಂಡುಹೋದರೆ, ಆಗ ನಾವು ತಿಳಿಯಬೇಕು ಅವರು ಜೀವಂತವಾಗಿಲ್ಲ; ಜೀವಂತವಾಗಿರುವವರು ತಾಗಿಸುವುದಿಲ್ಲ. ನಿರ್ಜೀವ ವಸ್ತುವಾಗಿದ್ದರೆ ಮಾತ್ರ ಹೊಡೆಯುತ್ತದೆ. ಆದುದರಿಂದ ಅವರೆಲ್ಲರೂ ನಿಮಗೆ ಗೋಡೆಗಳ ಹಾಗೆಯೇ ಎಂದು ಅರಿತುಕೊಂಡರು ಡಖೊ

(ಹಸ್ತಕ್ಷೇಪ) ಮಾಡಲು ಹೋಗಬಾರದು ಹಾಗೂ ಸ್ವಲ್ಪ ಸಮಯದ ನಂತರ ಹೇಳಬೇಕು, 'ನಡೆಯಿರಿ ಚಹಾ ಕುಡಿಯೋಣ' ಎಂದು.

ಯಾರೋ ಒಬ್ಬ ಹುಡುಗ ಕಲ್ಲಿನಿಂದ ಆಡುತ್ತಿರುವಾಗ, ಅದು ನಿಮ್ಮ ಮೇಲೆ ಬಿದ್ದು ರಕ್ತ ಬಂದರೆ ಏನು ಮಾಡುವಿರಿ? ಅವನ ಮೇಲೆ ಸಿಟ್ಟು ಮಾಡಿಕೊಳ್ಳುವಿರಿ. ಆದರೆ, ಅದೇ ನೀವು ನಡೆದುಕೊಂಡು ಹೋಗುವಾಗ ಬದಿಯಲ್ಲಿಯೇ ಇರುವ ಬಂಡೆಯಿಂದ ಕಲ್ಲು ನಿಮ್ಮ ಮೇಲೆ ಬಿದ್ದು, ರಕ್ತ ಸ್ರಾವವಾದರೆ ಏನು ಮಾಡುವಿರಿ? ಸಿಟ್ಟು ಮಾಡುತ್ತೀರಾ? ಆಗ ಮಾಡುವುದಿಲ್ಲ, ಅದಕ್ಕೆ ಕಾರಣವೇನು? ಯಾಕೆಂದರೆ ಅದು ಬಂಡೆಯಿಂದ ಬಿದ್ದಿರುವುದಾಗಿದೆ! ಬಿದ್ದ ಬಂಡೆಕಲ್ಲನ್ನು ಮೇಲಿನಿಂದ ಎಸೆದವರು ಯಾರು? ಅಲ್ಲದೆ, ಇಲ್ಲಿ ಆ ಹುಡುಗನು ತಾನು ಎಸೆದ ಕಲ್ಲಿನಿಂದ ನಿಮಗೆ ಪೆಟ್ಟಾಗಿರುವುದಕ್ಕೆ ಪಶ್ಚಾತ್ತಾಪ ಪಡುತ್ತಿರುತ್ತಾನೆ.

ಆದುದರಿಂದ, ಈ ಜಗತ್ತನ್ನು ತಿಳಿದುಕೊಳ್ಳಬೇಕು. ನಮ್ಮ ಬಳಿಗೆ ಬಂದರೆ, ಚಿಂತೆಗಳು ಉಂಟಾಗದಂತೆ ಮಾಡಿಬಿಡುತ್ತೇವೆ. ಆಗ ನೀವು ಸಂಸಾರದಲ್ಲಿ ಒಳ್ಳೆಯ ರೀತಿಯಿಂದ ಜೀವನವನ್ನು ನಡೆಸಿಕೊಂಡು, ನಿಮ್ಮ ಹೆಂಡತಿಯೊಂದಿಗೆ ನಿಷ್ಚಿಂತೆಯಿಂದ ಸುತ್ತಾಡಿಕೊಂಡಿರಬಹುದು! ಹಾಗೂ ಮಕ್ಕಳ ಜವಾಬ್ದಾರಿಗಳಾದ ಮದುವೆ-ಮುಂಜಿಗಳನ್ನೆಲ್ಲಾ ನಿಷ್ಚಿಂತೆಯಿಂದ ಮುಗಿಸಬಹುದು! ಆಗ, ಹೆಂಡತಿಯು ಸಂತೋಷಗೊಳ್ಳುವುದರ ಜೊತೆಗೆ ನಿಮ್ಮನ್ನೂ ಹೊಗಳಲು ಪ್ರಾರಂಭಿಸುತ್ತಾಳೆ, 'ಈಗಂತೂ ಬಹಳ ಜವಾಬ್ದಾರಿ ಬಂದುಬಿಟ್ಟಿದೆ ನನ್ನ ಯಜಮಾನರಿಗೆ!' ಎಂದು.

ಎಂದಾದರೂ ಹೆಂಡತಿಯು ಪಕ್ಕದ ಮನೆಯವರೊಂದಿಗೆ ಜಗಳವಾಡಿ ಅವಳ ತಲೆಯು ಬಿಸಿಯಾಗಿರುವಾಗ, ಅದೇ ಸಮಯದಲ್ಲಿ ನಾವು ಹೊರಗಿನಿಂದ ಮನೆಗೆ ಹೋದರೆ, ಅವಳು ಸಿಡುಕಿನಿಂದಲೇ ಮಾತನಾಡಿಸುತ್ತಾಳೆ. ಆಗ ನಾವೇನು ಮಾಡಬೇಕು? ಅವಳಂತೆ ನಾವೂ ಸಿಡುಕಲು ಪ್ರಾರಂಭಿಸಬೇಕೇನು? ಇಂತಹ ಪರಿಸ್ಥಿತಿಗಳು ಉಂಟಾದಾಗ, ಅಲ್ಲಿ ಅಡ್ಜಸ್ಟ್ ಮಾಡಿಕೊಳ್ಳಲು ನಾವು ನೋಡಬೇಕು. ಅವಳು ಇವತ್ತು ಯಾವ ಪರಿಸ್ಥಿತಿಯಿಂದಾಗಿ ಸಿಡುಕುತ್ತಿದ್ದಾಳೆ, ಯಾರ ಜೊತೆಯಲ್ಲಿ ಜಗಳವಾಗಿದೆ ಎನ್ನುವುದೇನಾದರೂ ತಿಳಿದಿದೆಯೇ? ನೀವು ಪುರುಷರು, ಅಲ್ಲಿ ಯಾವುದೇ ರೀತಿಯ ಭೇದಭಾವವನ್ನೂ ಉಂಟುಮಾಡಬಾರದು. ಅವಳು ಭೇದಭಾವವನ್ನು ಉಂಟುಮಾಡಲು ಮುಂದಾದರೆ, ನೀವು ಅದನ್ನು ಸರಿಪಡಿಸಿಬಿಡಬೇಕು. ಭೇದಭಾವವು ಜಗಳಕ್ಕೆ ಆಸ್ಪದವಾಗುತ್ತದೆ!

# ಸೈನ್ಸ್, ತಿಳಿದುಕೊಳ್ಳುವಂಥದ್ದು

**ಪ್ರಶ್ನಕರ್ತ:** ನಮಗೆ ಜಗಳವನ್ನು ಮಾಡಬೇಕೆಂದೇನು ಇರುವುದಿಲ್ಲ, ಆದರೂ ಎದುರಿನವರು ಜಗಳಕ್ಕೆ ಮುಂದಾದರೆ, ಆಗೇನು ಮಾಡುವುದು?

**ದಾದಾಶ್ರೀ:** ಆ ಗೋಡೆಯೊಂದಿಗೆ ಜಗಳವಾಡಲು ಪ್ರಾರಂಭಿಸಿದರೆ, ಎಷ್ಟು ಸಮಯದವರೆಗೆ ಜಗಳವಾಡಬಹುದು? ಒಂದು ದಿನ ಆ ಗೋಡೆಯಿಂದ ತಲೆಗೆ ಪೆಟ್ಟುಬಿದ್ದರೆ, ಆಗ ನಾವು ಅದಕ್ಕೇನು ಮಾಡಬಹುದು? ತಲೆಗೆ ಪೆಟ್ಟಾಯಿತೆಂದು ಅದರೊಂದಿಗೆ ಜಗಳಮಾಡಿ ನಾವು ಅದನ್ನು ಹೊಡೆಯಲಾಗುತ್ತದೆಯೇ? ಹಾಗೆಯೇ ಹೆಚ್ಚಾಗಿ ಜಗಳವಾಡುವವರನ್ನೂ ಕೂಡಾ ಗೋಡೆಗಳೆಂದು ಪರಿಗಣಿಸಬೇಕು! ಅಲ್ಲಿ ಅವರ ತಪ್ಪನ್ನು ಏನು ನೋಡುವುದು? ನಾವು ನಮ್ಮೊಳಗೆ ಅರಿತುಕೊಳ್ಳಬೇಕೇನೆಂದರೆ, ಅವರೂ ಸಹ ಗೋಡೆಗಳಂತೆ ಎಂದು, ಆಗ ಯಾವ ತೊಂದರೆಯು ಇರುವುದಿಲ್ಲ.

**ಪ್ರಶ್ನಕರ್ತ:** ನಾವು ಮೌನವಾಗಿದ್ದರೆ, ಆಗ ಎದುರಿನವರು ಬೇರೆ ರೀತಿಯಲ್ಲಿ ತಿಳಿದು, ನಮ್ಮದೇ ದೋಷವೆಂದು ಇನ್ನು ಹೆಚ್ಚಾಗಿ ಕ್ಲೇಶವನ್ನು ಮಾಡುತ್ತಾರೆ.

**ದಾದಾಶ್ರೀ:** ಅದೆಲ್ಲಾ ನಾವು ಅಂದುಕೊಂಡಿರುವುದು. ನಾನು ಮೌನವಾಗಿದುದರಿಂದ ಹಾಗೆ ಮಾಡುತ್ತಾರೆ ಎಂದು. ರಾತ್ರಿ ಕತ್ತಲಲ್ಲಿ ಎದ್ದು ಬಾತ್-ರೂಮ್ ಗೆ ಹೋಗುವಾಗ ಗೋಡೆಗೆ ಹೊಡೆದುಕೊಂಡರೆ, ಆಗ ನಾವು ಮೌನವಾಗಿದುದರಿಂದ ಹಾಗಾಯಿತಲ್ಲವೇ?

ಮೌನವಾಗಿದ್ದರೇನೂ, ಮಾತನಾಡಿದರೇನೂ ಯಾವುದೂ ಸ್ಪರ್ಶಿಸುವುದಿಲ್ಲ, ಏನು ಆಗುವುದು-ಬಿಡುವುದು ಇಲ್ಲ. ನಾವು ಮೌನವಾಗಿ ಇದ್ದುಬಿಟ್ಟರೆ, ಎದುರಿನವರಲ್ಲಿ ಪರಿಣಾಮ ಉಂಟಾಗುತ್ತದೆ ಎನ್ನುವುದೇನೂ ಇಲ್ಲ ಅಥವಾ ಮಾತನಾಡಿದರೆ ಪರಿಣಾಮ ಉಂಟಾಗುತ್ತದೆ ಎನ್ನುವುದೂ ಇಲ್ಲ. 'ಓನ್ಲಿ ಸೈಂಟಿಫಿಕ್ ಸರ್ಕಮ್ಸ್ಟಾನ್ಸಿಯಲ್ ಎವಿಡೆನ್ಸ್' (ಕೇವಲ ವೈಜ್ಞಾನಿಕವಾದ ಸಂಯೋಗಗಳ ಪುರಾವೆಯಾಗಿದೆ). ಯಾರಲ್ಲಿಯೂ ಯಾವ ಅಧಿಕಾರವು ಇಲ್ಲ, ಅಷ್ಟರಮಟ್ಟಿಗೆ ಯಾರ ಅಧಿಕಾರವೂ ಇಲ್ಲದೆ ಇರುವ ಜಗತ್ತು. ಅಲ್ಲಿ ಯಾರೇನಾದರು ಮಾತನಾಡಲು ಸಾಧ್ಯವೇ? ಆ ಗೋಡೆಗೆ ಅಧಿಕಾರವಿದಿದ್ದರೆ, ಆಗ ಅವರಿಗೂ ಅಧಿಕಾರವಿರುತ್ತಿತ್ತು. ನಮಗೆ ಆ ಗೋಡೆಯನ್ನು ದೂಷಿಸುವ ಅಧಿಕಾರವಿದೆಯೇ? ಹಾಗೆಯೇ ಎದುರಿಗಿರುವ ಆ ವ್ಯಕ್ತಿಯ ನಿಮಿತ್ತದಿಂದ ಸಂಘರ್ಷಣೆಯು ಉಂಟಾಗಿದೆ, ಅದು ಆಗದೆ ಬಿಡುವುದಿಲ್ಲ. ಸುಮ್ಮನೆ ಕೆಲಸವಿಲ್ಲದೆ ಎಗರಾಡಿದರೇನು ಅರ್ಥ? ಅಲ್ಲಿ ಅವರ ಕೈಯಲ್ಲಿ ಅಧಿಕಾರವಿಲ್ಲ! ಹಾಗಾಗಿ ನೀವೂ ಕೂಡಾ ಗೋಡೆಯಂತೆ ಆಗಿಬಿಡಬೇಕು! ನೀವು ಹೆಂಡತಿಯನ್ನು ತೆಗಳುತ್ತಾ ದೂಷಿಸಿದರೆ,

ಅವಳೊಳಗಿರುವ ಭಗವಂತ ನೊಂದಣಿ ಮಾಡಿಕೊಳ್ಳುತ್ತಾನೆ, 'ಅವನು ನನ್ನನು ದೂಷಿಸುತ್ತಿದ್ದಾನೆ!' ಎಂದು. ಒಂದುವೇಳೆ ಅವಳು ನಿಮ್ಮನ್ನು ದೂಷಿಸಿದರೆ, ನೀವು ಗೋಡೆಯಂತಾಗಿಬಿಟ್ಟರೆ, ಆಗ ನಿಮ್ಮೊಳಗಿರುವ ಭಗವಂತ ನಿಮಗೆ 'ಹೆಲ್ಪ್' ಮಾಡುತ್ತಾನೆ!

ಹಾಗಾಗಿ ತಪ್ಪು ನಮ್ಮದಾಗಿದ್ದರೆ ಮಾತ್ರ ಗೋಡೆಯು ಅಡಚಣೆ ಉಂಟುಮಾಡುವುದು. ಅದು ಗೋಡೆಯ ತಪ್ಪಲ್ಲ. ಆಗ ಜನರು ನನ್ನನು ಕೇಳುತ್ತಾರೆ, 'ಈ ಲೋಕದ ಜನರೆಲ್ಲಾ ಗೋಡೆಗಳ ಹಾಗೆಯೇ?' ಎಂದು. ಅವರಿಗೆ ನಾನು ಹೇಳುವುದೇನೆಂದರೆ, 'ಹೌದು, ಲೋಕದ ಜನರೆಲ್ಲಾ ಗೋಡೆಗಳೇ ಆಗಿದ್ದಾರೆ'. ಇದನ್ನು ನಾನು ನೋಡಿಯೇ ಹೇಳುತ್ತಿರುವುದು. ಇದೇನು ಹರಟೆಯಲ್ಲ.

ಯಾರೊಂದಿಗೆ ಆಗಲಿ ಬೇಧಭಾವವನ್ನು ಹೊಂದಿರುವುದು ಹಾಗೂ ಗೋಡೆಯೊಂದಿಗೆ ಗುದ್ದಾಡುವುದು, ಇವೆರಡೂ ಒಂದೇ ಆಗಿದೆ. ಇವೆರಡರಲ್ಲಿ ವ್ಯತ್ಯಾಸವೇನೂ ಇಲ್ಲ. ಆ ಗೋಡೆಯೊಂದಿಗೆ ಹೊಡೆದುಕೊಳ್ಳುವುದು ಯಾಕೆ? ಸರಿಯಾಗಿ ಕಾಣಿಸದಿರುವ ಕಾರಣದಿಂದ ಹೊಡೆದುಕೊಳ್ಳುವುದಾಗಿದೆ. ಹಾಗೆಯೇ ಇಲ್ಲಿ ಬೇಧಭಾವವು ಉಂಟಾಗುವುದು ಕೂಡಾ ಕಾಣಿಸದಿರುವ ಕಾರಣದಿಂದ ಮುಂದಿರುವುದು ಕಾಣಿಸುವುದಿಲ್ಲ, ಮುಂದಕ್ಕೆ ಸೊಲ್ಯೂಷನ್ ಹೊಳೆಯುವುದಿಲ್ಲ ಹಾಗಾಗಿ ಬೇಧಭಾವವು ಉಂಟಾಗುತ್ತದೆ. ಈ ಕ್ರೋಧ-ಮಾನ-ಮಾಯಾ-ಲೋಭಗಳನ್ನು ಮಾಡುವಾಗ, ಮುಂದೇನಾಗುವುದೆಂದು ಕಾಣಿಸದೇ ಇರುವುದರಿಂದ ಮಾಡುತ್ತಾರೆ! ಅವರಿಗೆ ಈ ವಿಚಾರವನ್ನು ತಿಳಿಸಿಕೊಡಬೇಕಲ್ಲವೇ? ಪೆಟ್ಟಾಗುವುದು ಅವನ ದೋಷದಿಂದ, ಅಲ್ಲಿ ಗೋಡೆಯ ದೋಷವೇನಾದರೂ ಇದೆಯೇ? ಹಾಗೆ ಈ ಜಗತ್ತಿನಲ್ಲಿ ಎಲ್ಲಾ ಗೋಡೆಗಳೇ ಆಗಿವೆ. ಗೋಡೆಗೆ ತಾಗಿದಾಗ, ಅಲ್ಲಿ ನಾವು ಸರಿಯೋ-ತಪ್ಪೋ ಎಂದು ವಿಮರ್ಶಿಸಲು ಹೋಗುತ್ತೇವೆಯೇ? ಅಥವಾ 'ಅಲ್ಲಿ ನನ್ನದು' ಸರಿ, ಎಂದು ಜಗಳವಾಡುವ ಗೋಜಿಗೆ ಹೋಗುವುದಿಲ್ಲ ಅಲ್ಲವೇ? ಹಾಗೆಯೇ ಈಗ ಗೋಡೆಯ ಸ್ಥಿತಿಯಂತೆಯೇ ಆಗಿದೆ. ಅವರೊಂದಿಗೆ ಸರಿಯೆಂದು ಅನ್ನಿಸಿಕೊಳ್ಳಬೇಕಾದ ಅವಶ್ಯಕತೆಯೇ ಇಲ್ಲ.

ಯಾರೇ ಅಡ್ಡಿಪಡಿಸಿದರು ಆಗ ತಿಳಿದುಕೊಳ್ಳಬೇಕು, ಅವೆಲ್ಲವೂ ಗೋಡೆಗಳು ಎಂದು. ನಂತರ ಗೋಡೆಯ ಬದಿಯಲ್ಲಿನ 'ಬಾಗಿಲು ಎಲ್ಲಿದೆ?' ಎಂದು ಹುಡುಕಿದರೆ ಕತ್ತಲೆಯಲ್ಲಿಯೂ ಬಾಗಿಲು ಸಿಕ್ಕಿಬಿಡುತ್ತದೆ. ಕೈಗಳನ್ನು ಚಾಚಿ ಹುಡುಕುತ್ತಾ ಹೋದರೆ ಬಾಗಿಲು ಸಿಗುವುದೋ, ಇಲ್ಲವೋ? ಅನಂತರ ಅಲ್ಲಿಂದ ಹೊರಗೆ ದಾಟಿಬಿಡಬೇಕು. ಸಂಘರ್ಷಣೆಯನ್ನು ಉಂಟುಮಾಡಬಾರದೆಂಬ ಕಾನೂನನ್ನು ಪಾಲಿಸಬೇಕು ಹಾಗೂ ನಾವು ಯಾರೊಂದಿಗೂ ಸಂಘರ್ಷಣೆಗೆ ಒಳಗಾಗಬಾರದು.

# ಹೀಗೆ ಜೀವನವನ್ನು ಜೀವಿಸಬಹುದು

ಜೀವನವನ್ನು ಜೀವಿಸಲು ಯಾರಿಗೂ ಬರುವುದೇ ಇಲ್ಲ! ಮದುವೆಗೆ ಅರ್ಹರಲ್ಲದವರಿಗೂ, ಬಹಳ ಕಷ್ಟದಲ್ಲಿ ಮದುವೆಯನ್ನು ಮಾಡಿಸಲಾಯಿತು! ತಂದೆಯಾಗುವ ಅರ್ಹತೆಯಿಲ್ಲದೆ ಇದ್ದರೂ, ತಂದೆಯಾಗಿಬಿಟ್ಟಿದ್ದಾಯ್ತು! ಈಗಲಾದರೂ ಮಕ್ಕಳು ಮೆಚ್ಚುವಂತಹ ಜೀವನವನ್ನು ಜೀವಿಸಬೇಕು. ದಿನದ ಆರಂಭದಿಂದಲೇ ನಿಶ್ಚಯ ಮಾಡಬೇಕು, 'ಇವತ್ತು ಯಾರೊಂದಿಗೂ ಸಂಘರ್ಷಣೆಗೆ ಒಳಗಾಗಬಾರದು,' ಎಂದು. ಸಂಘರ್ಷಣೆಯಿಂದ ಏನು ಅನುಕೂಲವಾಗುತ್ತದೆ ಎಂದು ನನಗೆ ತೋರಿಸಿ ಹಾಗೂ ಏನು ಲಾಭವಾಗುತ್ತದೆ?

**ಪ್ರಶ್ನಕರ್ತ:** ದುಃಖವೇ ಆಗಿದೆ.

**ದಾದಾಶ್ರೀ:** ದುಃಖವಾಗುವುದಷ್ಟೇ ಅಲ್ಲ, ಈ ಸಂಘರ್ಷಣೆಯಿಂದ ತಕ್ಷಣಕ್ಕೆ ದುಃಖವಂತೂ ಆಗುತ್ತದೆ, ನಂತರ ದಿನವೆಲ್ಲಾ ಹಾಳಾಗುತ್ತದೆ ಅಲ್ಲದೆ, ಮುಂದಿನ ಜನ್ಮದಲ್ಲಿ ಮನುಷ್ಯತ್ವವನ್ನು ಕಳೆದುಕೊಳ್ಳುವಂತಾಗುತ್ತದೆ. ಮನುಷತ್ವವು ಯಾವಾಗ ಉಳಿಯುವುದೆಂದರೆ, ಸಜ್ಜನರಾಗಿದ್ದರೆ ಮಾತ್ರ ಮನುಷ್ಯತ್ವವು ಉಳಿಯುತ್ತದೆ. ಆದರೆ, ಪಶುಗಳ ಹಾಗೆ ಹೊಡೆಯುವುದು, ಗುದ್ದಾಡುವುದು, ಹೀಗೆ ಮತ್ತೊಬ್ಬರಿಗೆ ತೊಂದರೆ ಕೊಡುತ್ತಲೇ ಇದ್ದರೆ, ನಂತರ ಮತ್ತೆ ಮನುಷ್ಯ ಜನ್ಮವು ದೊರಕುವುದೇ? ದನಗಳು-ಎಮ್ಮೆಗಳು ಕೊಂಬಿನಿಂದ ಹೊಡೆದಾಡುತ್ತವೋ ಅಥವಾ ಮನುಷ್ಯರು ಹೊಡೆದಾಡುತ್ತಾರೋ?

**ಪ್ರಶ್ನಕರ್ತ:** ಮನುಷ್ಯರೇ ಹೆಚ್ಚು ಹೊಡೆದಾಡುತ್ತಾರೆ.

**ದಾದಾಶ್ರೀ:** ಮನುಷ್ಯರು ಹೊಡೆದಾಡಿದರೆ ಮತ್ತೆ ಅವರು ಪ್ರಾಣಿ ಜನ್ಮಕ್ಕೆ ಹೋಗಬೇಕಾಗುತ್ತದೆ. ಅಲ್ಲದೆ ಎರಡು ಕಾಲಿದ್ದವರು ನಾಲ್ಕು ಕಾಲುಗಳನ್ನು ಹೊಂದುವುದರ ಜೊತೆಗೆ ಬಾಲ ಬೇರೆ! ಅಲ್ಲೇನೂ ಹೇಗೆಂದರೆ ಹಾಗೆ ಇರುವುದಾಗಿದೆಯೇ? ಅಲ್ಲಿ ಏನೂ ದುಃಖವಿಲ್ಲವೇ? ಬಹಳ ದುಃಖವಿದೆ. ಸ್ವಲ್ಪ ತಿಳಿದುಕೊಳ್ಳಬೇಕು, ಹೇಗೆಂದರೆ ಹಾಗೆ ಇದ್ದರಾಯಿತೇ?

# ಸಂಘರ್ಷಣೆಯು, ನಮ್ಮದೇ ಅಜ್ಞಾನವಾಗಿದೆ

**ಪ್ರಶ್ನಕರ್ತ:** ಜೀವನದಲ್ಲಿ ಸ್ವಭಾವಗಳು ಹೊಂದದಿರುವ ಕಾರಣದಿಂದ ಸಂಘರ್ಷಣೆಗಳಾಗುತ್ತವೆ ಅಲ್ಲವೇ?

**ದಾದಾಶ್ರೀ:** ಸಂಘರ್ಷಣೆಯಿಂದಾಗಿಯೇ ಅದನ್ನು ಸಂಸಾರವೆಂದು ಕರೆಯುವುದು.

**ಪ್ರಶ್ನಕರ್ತ:** ಸಂಘರ್ಷಣೆಗಳು ಉಂಟಾಗಲು ಕಾರಣವೇನು?

**ದಾದಾಶ್ರೀ:** ಅಜ್ಞಾನವಾಗಿದೆ. ಎಲ್ಲಿಯವರೆಗೆ ಬೇರೆಯವರೊಂದಿಗೆ ಬೇಧಭಾವವು ಉಂಟಾಗುತ್ತದೆಯೋ, ಅದು ನಿಮ್ಮ ನಿರ್ಬಲತೆಯನ್ನು ಸೂಚಿಸುತ್ತದೆ. ಅದು ಜನರ ತಪ್ಪಲ್ಲ. ಬೇಧಭಾವ ಉಂಟುಮಾಡುವ ತಪ್ಪು ನಿಮ್ಮದಾಗಿದೆ. ಲೋಕದ ಜನರ ತಪ್ಪು ಇರುವುದೇ ಇಲ್ಲ. ಅವರು ಗೊತ್ತಿದ್ದೂ ಮಾಡುತ್ತಿದ್ದರೂ ಸಹ, ನಾವೇ ಮೊದಲಿಗೆ ಹೋಗಿ ಕ್ಷಮೆಯಾಚಿಸಿಬಿಡಬೇಕು, 'ನನಗೆ ಅಷ್ಟು ತಿಳಿಯುವುದಿಲ್ಲ' ಎಂದು. ಲೋಕದ ಜನರು ತಪ್ಪು ಮಾಡುವುದೇ ಇಲ್ಲ. ಜನರು ಬೇಧಭಾವವನ್ನು ಮಾಡಲು ಸಾಧ್ಯವೇ ಇಲ್ಲ. ಎಲ್ಲಿ ಸಂಘರ್ಷಣೆಯು ಉಂಟಾಗುತ್ತದೆ, ಅಲ್ಲಿ ನಮ್ಮದೇ ತಪ್ಪಾಗಿದೆ.

**ಪ್ರಶ್ನಕರ್ತ:** ಸಂಘರ್ಷಣೆಯನ್ನು ತಪ್ಪಿಸಬೇಕೆಂದಿದ್ದರೂ ಎದುರಿನಿಂದ ಕಂಬವು ಅಡ್ಡಪಡಿಸುವಾಗ, ನಾವು ಅದರಿಂದ ತಪ್ಪಿಸಿಕೊಳ್ಳಬೇಕೆನ್ನುವುದರೊಳಗೆ ಅದು ನಮ್ಮ ಮೇಲೆ ಬಿದ್ದುಬಿಟ್ಟರೆ, ನಾವು ಏನು ಮಾಡಬೇಕು?

**ದಾದಾಶ್ರೀ:** ಬಿದ್ದಾಗಲೂ ಅದರಿಂದ ನುಣುಚಿಕೊಂಡುಬಿಡಬೇಕು.

**ಪ್ರಶ್ನಕರ್ತ:** ಎಷ್ಟೆಲ್ಲಾ ಪ್ರಯತ್ನ ಪಟ್ಟರೂ ಕಂಬವು ತಾಗಿಸದೆ ಬಿಡುವುದಿಲ್ಲ. ಉದಾಹರಣೆಗೆ: ನಮ್ಮ ಹೆಂಡತಿಯು ಜಗಳವಾಡಲು ಬಂದರೆ.

**ದಾದಾಶ್ರೀ:** ಜಗಳವಾಡಲು ಬಂದರೆ, ಆ ಸಮಯದಲ್ಲಿ ನೀವು ಏನು ಮಾಡಬಹುದು, ಅದನ್ನು ಯೋಚಿಸಿ ಪರಿಹಾರ ಕೊಂಡುಕೊಳ್ಳಬೇಕು.

**ಪ್ರಶ್ನಕರ್ತ:** ಎದುರಿಗಿರುವ ವ್ಯಕ್ತಿಯು ನಮ್ಮ ಅಪಮಾನವನ್ನು ಮಾಡಿದಾಗ, ಆ ಅಪಮಾನದಿಂದ ನಮಗೆ ನೋವು ಉಂಟಾಗಲು ಕಾರಣ ನಮ್ಮ ಅಹಂಕಾರವಾಗಿದೆಯೇ?

**ದಾದಾಶ್ರೀ:** ನಿಜವಾದ ರೀತಿಯಲ್ಲಿ, ಎದುರಿನವರು ಏನು ಅಪಮಾನ ಮಾಡುತ್ತಾರೆ, ಆಗ ಅವರು ನಮ್ಮ ಅಹಂಕಾರವನ್ನು ಕರಗಿಸಿಬಿಡುತ್ತಾರೆ, ಅಲ್ಲದೆ ಅದು ಮೊದಲಿನ 'ಡ್ರಾಮಾಟಿಕ್' ಅಹಂಕಾರ; ಎಷ್ಟು excess ಆಗಿತ್ತು ಅದು ಕರಗಿಹೋಗುತ್ತದೆ ಅದರಿಂದ ಏನು ಕೆಡಕಾಗುವುದಿದೆ? ಈ ಕರ್ಮಗಳು ಬಿಡಿಸಿಕೊಳ್ಳಲು ಬಿಡುವುದಿಲ್ಲ. ನಾವಂತೂ ಚಿಕ್ಕ ಮಗು ಎದುರಾಗಿ ನಿಂತರೂ ಕೇಳಿಕೊಳ್ಳುತ್ತೇವೆ, ಈಗ ಬಿಟ್ಟುಬಿಡು ಎಂದು.

# ಸೇರಿಸಿಕೊಂಡುಬಿಡು ಎಲ್ಲವನ್ನು ಸಾಗರದಂತೆ ಉದರದೊಳಗೆ

**ಪ್ರಶ್ನಕರ್ತ:** ದಾದಾ, ವ್ಯವಹಾರದಲ್ಲಿ ವ್ಯೂ-ಪಾಯಿಂಟ್ ನ ಆಧಾರದಿಂದಾಗುವ ಸಂಘರ್ಷಣೆಗಳಲ್ಲಿ ಹಿರಿಯರು ಕಿರಿಯರ ತಪ್ಪನ್ನು ಹುಡುಕುತ್ತಾರೆ. ಕಿರಿಯರು ಅವರಿಗಿಂತ ಕಿರಿಯರ ತಪ್ಪನ್ನು ಹುಡುಕುತ್ತಾರೆ. ಅದು ಯಾಕೆ ಹಾಗೆ?

**ದಾದಾಶ್ರೀ:** ಅದೇನೆಂದರೆ, ದೊಡ್ಡದು ಚಿಕ್ಕದನ್ನು ನುಂಗಿಬಿಡುತ್ತದೆ. ಹಾಗೆಯೇ, ಹಿರಿಯರು ಕಿರಿಯರ ತಪ್ಪನ್ನು ತೋರಿಸುತ್ತಾರೆ. ಅದರ ಬದಲಿಗೆ, ನಾವೇ ಹೇಳಿಬಿಡಬೇಕು, 'ನನ್ನದೇ ತಪ್ಪು,' ಎಂದು. ತಪ್ಪನ್ನು ನಮ್ಮದೆಂದು ಸ್ವೀಕರಿಸಿದರೆ, ಆಗ ಅದಕ್ಕೆ ಪರಿಹಾರಸಿಗುತ್ತದೆ. ನಾವು ಇನ್ನೇನು ಮಾಡಬಹುದು? ಇನ್ನೊಬ್ಬರಿಗೆ ಯಾವುದನ್ನು ಸಹಿಸಿಕೊಳ್ಳಲಾಗುವುದಿಲ್ಲವೋ, ಅದನ್ನು ನಾವು ನಮ್ಮ ತಲೆಯ ಮೇಲೆಯೇ ತೆಗೆದುಕೊಂಡುಬಿಡಬೇಕು. ಬೇರೆಯವರ ತಪ್ಪುಗಳನ್ನು ಹುಡುಕಲು ಹೋಗಬಾರದು. ಬೇರೆಯವರ ಮೇಲೆ ಹೊರಿಸುವುದು ಯಾವ ರೀತಿಯಲ್ಲಿ ಸರಿ? ನಮ್ಮ ಹತ್ತಿರವಂತೂ, ಸಾಗರದಷ್ಟು ದೊಡ್ಡ ಉದರವಿದೆ! ನೀವೇ ನೋಡಿ, ಇಷ್ಟು ದೊಡ್ಡ ಮುಂಬೈ ನಗರದ ಎಲ್ಲಾ ಚರಂಡಿಗಳ ನೀರನ್ನು ಸಮುದ್ರವು ತನ್ನೊಳಗೆ ಸೇರಿಸಿಕೊಂಡು ಬಿಡುವುದಿಲ್ಲವೇ? ಹಾಗೆಯೇ ನಾವು ಕೂಡಾ ಸೇರಿಸಿಕೊಂಡು ಬಿಡಬೇಕು. ಇದರಿಂದ ಏನಾಗುತ್ತದೆ ನಮ್ಮ ಮಕ್ಕಳ ಮೇಲೆ ಹಾಗೂ ಬೇರೆಲ್ಲರ ಮೇಲೂ ಪ್ರಭಾವ ಬೀರುತ್ತದೆ. ಅವರೂ ನೋಡಿ ಕಲಿತುಕೊಳ್ಳುತ್ತಾರೆ. ಮಕ್ಕಳಿಗೂ ತಿಳಿಯುತ್ತದೆ, ಅವರ ಹೊಟ್ಟೆ ಸಮುದ್ರದಂತೆ! ಏನೇ ಇದ್ದರೂ ಎಲ್ಲವನ್ನು ನುಂಗಿಬಿಡುತ್ತಾರೆ! ವ್ಯವಹಾರದಲ್ಲಿನ ನಿಯಮವೇನೆಂದರೆ, ಅಪಮಾನ ಮಾಡುವವರು ಅವರ ಶಕ್ತಿಯನ್ನು ಕೊಟ್ಟುಹೋಗುತ್ತಾರೆ. ಆದುದರಿಂದ, ಅದನ್ನು ನಗು ಮುಖದಿಂದ ಸ್ವೀಕರಿಸಿಬಿಡಬೇಕು!

# 'ನ್ಯಾಯ ಸ್ವರೂಪ'ದಲ್ಲಿ ಉಪಾಯವೇ ತಪಸ್ಸು!

**ಪ್ರಶ್ನಕರ್ತ:** ಸಂಘರ್ಷಣೆಯನ್ನು ತಪ್ಪಿಸುವುದು, ಸಮಭಾವದಿಂದ ನಿಭಾಯಿಸುವುದು ನಮ್ಮ ವರ್ತನೆಯಲ್ಲಿ ಇದ್ದರೂ ಸಹ, ಎದುರಿಗಿರುವ ವ್ಯಕ್ತಿಯು ಬಹಳ ತೊಂದರೆ ಕೊಟ್ಟರೆ, ಅಪಮಾನ ಮಾಡಿದರೆ, ಆಗ ನಾವೇನು ಮಾಡಬೇಕು?

**ದಾದಾಶ್ರೀ:** ಏನೂ ಇಲ್ಲ, ಅದು ನಮ್ಮ ಪಾಲಿನ ಲೆಕ್ಕದ್ದಾಗಿದೆ. ನಾವು ಅದನ್ನು 'ಸಮಭಾವದಿಂದ ನಿಭಾಯಿಸಲೇ ಬೇಕೆಂದು' ನಿಶ್ಚಯಿಸಬೇಕು. ನಾವು ನಮ್ಮ ಕಾಯಿದೆಯಲ್ಲಿಯೇ ಇರಬೇಕು ಹಾಗೂ ನಾವು ನಮ್ಮ ರೀತಿಯಿಂದ ಪಜಲ್ ಅನ್ನು ಸಾಲ್ವ್ ಮಾಡಿಕೊಳ್ಳುತ್ತಾ ಹೋಗಬೇಕು.

**ಪ್ರಶ್ನಕರ್ತ:** ಈ ಸಂಘರ್ಷಣೆಗಳು ಆಗುವುದೆಲ್ಲವೂ 'ವ್ಯವಸ್ಥಿತ'ವನ್ನು ಆಧರಿಸಿ ಕೊಂಡಿರುವುದಲ್ಲವೇ?

**ದಾದಾಶ್ರೀ:** ಹೌದು, ಸಂಘರ್ಷಣೆಯು ಉಂಟಾಗುವುದು ಅದು 'ವ್ಯವಸ್ಥಿತ'ವನ್ನು ಆಧರಿಸಿ ಎನ್ನುವುದು ಸರಿ, ಆದರೆ ಹಾಗೆಂದು ಯಾವಾಗ ಹೇಳಬೇಕು? ಸಂಘರ್ಷಣೆಯು ಉಂಟಾದ ನಂತರವಾದರೂ, 'ಸಂಘರ್ಷಣೆಯನ್ನು ಉಂಟುಮಾಡಬಾರದು' ಎನ್ನುವ ನಿಶ್ಚಯವು ನಮಗೆ ಇದ್ದರೆ. ಎದುರಿಗೆ ಕಂಬ ಕಾಣಿಸುತ್ತಿರುವಾಗಲೇ ನಾವು ತಿಳಿದುಕೊಳ್ಳಬೇಕು, ಈಗ ಆ ಕಂಬವು ಅಡ್ಡ ಬರುತ್ತದೆ ಹಾಗಾಗಿ ತಿರುಗಿಹೋಗಬೇಕಾಗುತ್ತದೆ, ಎಂದು. ಆಗ ಸಂಘರ್ಷಣೆ ಆಗುವುದೇ ಇಲ್ಲ. ಹಾಗೆ ಮಾಡಿದರೂ ಕೂಡಾ ಸಂಘರ್ಷಣೆಯು ಉಂಟಾಗಿಬಿಟ್ಟರೆ, ಆಗ ನಾವು ಹೇಳಬಹುದು, ಅದು 'ವ್ಯವಸ್ಥಿತ್' ಎಂದು. ಮೊದಲಿಗೆಯೇ, 'ವ್ಯವಸ್ಥಿತ್' ಎಂದುಕೊಂಡು ನಡೆಸಿದರೆ, ಅದು 'ವ್ಯವಸ್ಥಿತ್' ಅನ್ನು ದುರುಪಯೋಗ ಮಾಡಿಕೊಳ್ಳಲಾಗಿದೆ ಎಂದು ಹೇಳಲಾಗುತ್ತದೆ.

## ಸಂಘರ್ಷಣೆಯಿಂದ ಅಳಿವುದು ಶಕ್ತಿಗಳೆಲ್ಲಾ

ಈಗ ಯಾವುದೆಲ್ಲಾ ಆತ್ಮಶಕ್ತಿಗಳು ನಾಶಹೊಂದುತ್ತಿವೆಯೋ, ಅವೆಲ್ಲವೂ ಸಂಘರ್ಷಣೆಯಿಂದಾಗಿದೆ. ಸಂಘರ್ಷದಿಂದ ಸಹಜವಾಗಿಯೇ ಹೊಡೆದುಕೊಂಡರೂ ಕೂಡಾ ನಾಶವಾಗಿಬಿಡುತ್ತವೆ! ಎದುರಿನವರ ಹೊಡೆತಕ್ಕೆ ಸಿಕ್ಕಿಬಿದ್ದರೂ ನಾವು ಸಂಯಮದಿಂದ ಇರಬೇಕಾಗುತ್ತದೆ. ಸಂಘರ್ಷಣೆಗಳು ಉಂಟಾಗಲೇ ಬಾರದು. ಅಲ್ಲಿ ಬೇಕಿದ್ದರೆ, ಈ ದೇಹವು ಹೊರಟು ಹೋಗುವುದಿದ್ದರೆ ಹೋಗಲಿ (ಅದೆಂತಹ ವಿಕಟ ಪರಿಸ್ಥಿತಿಯೇ ಬರಲಿ), ಆದರೆ ಸಂಘರ್ಷಣೆಯನ್ನು ಮುಂದುವರಿಸಿಕೊಂಡು ಹೋಗದಾಗೆ ನೋಡಿಕೊಳ್ಳಬೇಕು. ಈ ಸಂಘರ್ಷಣೆ ಎನ್ನುವುದನ್ನು ಮಾಡದೆಹೋದರೆ, ಆಗ ಮನುಷ್ಯನು ಮೋಕ್ಷಕ್ಕೆ ಹೋಗಿಬಿಡುತ್ತಾನೆ. ಯಾರು, 'ನಾನು ಸಂಘರ್ಷಣೆಗೆ ಒಳಗಾಗಬಾರದೆಂದು' ಅರಿತುಕೊಂಡುಬಿಡುತ್ತಾರೆ, ಅಂಥವರಿಗೆ ಗುರುವಿನ ಅಥವಾ ಬೇರೆ ಯಾರ ಅವಶ್ಯಕತೆಯೂ ಇರುವುದಿಲ್ಲ. ಅವರು ಒಂದೆರಡು ಅವತಾರಗಳಲ್ಲಿ ಮೋಕ್ಷಕ್ಕೆ ಹೋಗಿಬಿಡುತ್ತಾರೆ. 'ಸಂಘರ್ಷಣೆಗೆ ಮುಂದಾಗಲೇ ಬಾರದು' ಎನ್ನುವುದು ಯಾರಿಗೆ ಶ್ರದ್ಧೆಯಲ್ಲಿ ಮೂಡುತ್ತದೆ ಹಾಗೂ ನಿಶ್ಚಯವನ್ನೂ ಮಾಡಲಾಗುತ್ತದೆ, ಅಲ್ಲಿಂದಲೇ ಅವರು ಸಂಕೀತರಾಗಿ ಬಿಡುತ್ತಾರೆ! ಹಾಗಾಗಿ ಯಾರಾದರು ಸಂಕೀತರಾಗಲು ಬಯಸಿದರೆ, ಅವರಿಗೆ ನಾವು ಗ್ಯಾರಂಟಿಯಿಂದ ಹೇಳುತ್ತೇವೆ, 'ಹೋಗಿ, ಸಂಘರ್ಷಣೆಯನ್ನು ಮಾಡುವುದಿಲ್ಲವೆಂದು ನಿಶ್ಚಯಿಸಿಬಿಡಿ ಆಗಲಿಂದಲೇ ನೀವು ಸಂಕೀತರಾಗುವಿರಿ!' ದೇಹಕ್ಕೆ ಹೊಡೆದುಕೊಂಡರೆ ಅಥವಾ ಪೆಟ್ಟುಬಿದ್ದರೆ, ಅದಕ್ಕೆ ಔಷಧವನ್ನು ಮಾಡಿದರೆ

ವಾಸಿಯಾಗಿಬಿಡುತ್ತದೆ. ಆದರೆ, ಕಲಹದಿಂದ ಮತ್ತು ಸಂಘರ್ಷಣೆಯಿಂದಾಗಿ, ಮನಸ್ಸಿನ ಮೇಲೆ ಕುರುಹು ಬಿದ್ದರೆ, ಬುದ್ಧಿಯಲ್ಲಿ ಕುರುಹು ಉಳಿದರೆ, ಅದನ್ನು ಯಾರು ತೆಗೆಯುವುದು? ಸಾವಿರಾರು ಅವತಾರಗಳನ್ನು ಪಡೆದರೂ ಅದನ್ನು ಹೋಗಲಾಡಿಸಲಾಗುವುದಿಲ್ಲ.

**ಪ್ರಶ್ನಕರ್ತ:** ಘರ್ಷಣೆ ಹಾಗೂ ಸಂಘರ್ಷಣೆಯಿಂದ ಮನಸ್ಸು ಮತ್ತು ಬುದ್ಧಿಯ ಮೇಲೆ ಪೆಟ್ಟುಬೀಳುತ್ತದೆಯೇ?

**ದಾದಾಶ್ರೀ:** ನಿಜವಾಗಿ! ಮನಸ್ಸಿನ ಮೇಲೆ, ಬುದ್ಧಿಯ ಮೇಲೆ ಮಾತ್ರವಲ್ಲ, ಇಡೀ ಅಂತಃಕರಣದ ಮೇಲೂ ಪೆಟ್ಟುಬೀಳುತ್ತಲೇ ಇರುತ್ತದೆ ಹಾಗೂ ಅದರ ಪರಿಣಾಮವು ಶರೀರದ ಮೇಲೂ ಉಂಟಾಗುತ್ತದೆ. ಹೀಗೆ ಸಂಘರ್ಷಣೆಯಿಂದ ಎಷ್ಟೊಂದೆಲ್ಲಾ ಸಂಕಷ್ಟಗಳು!

**ಪ್ರಶ್ನಕರ್ತ:** ತಾವು ಹೇಳಿದಂತೆ, ಸಂಘರ್ಷಣೆಯಿಂದ ನಷ್ಟವಾಗಿರುವ ಶಕ್ತಿಗಳನ್ನೆಲ್ಲಾ ಮತ್ತೆ ಜಾಗ್ರತಿಯಿಂದ ಸೆಳೆಯಬಹುದೆನ್ನುವುದು ನಿಜವೇ?

**ದಾದಾಶ್ರೀ:** ಶಕ್ತಿಗಳನ್ನು ಸೆಳೆಯುವ ಅವಶ್ಯಕತೆ ಇಲ್ಲ. ಶಕ್ತಿಗಳು ಇವೆ. ಈಗ ಆ ಶಕ್ತಿಗಳು ಉತ್ಪನ್ನವಾಗುತ್ತವೆ. ಪೂರ್ವದಲ್ಲಿ ಸಂಘರ್ಷಣೆಯಿಂದ ಯಾವ ಶಕ್ತಿಗಳು ನಷ್ಟವಾಗಿದ್ದವೋ, ಅವೇ ಪುನಃ ಉತ್ಪನ್ನವಾಗುತ್ತವೆ. ಆದರೆ, ಈಗ ಹೊಸದಾಗಿ ಸಂಘರ್ಷಣೆಯನ್ನು ಉಂಟುಮಾಡಿದರೆ ಮತ್ತೆ ಶಕ್ತಿಯು ಹೊರಟುಹೋಗುತ್ತದೆ; ಈಗ ಉತ್ಪನ್ನವಾಗಿರುವ ಶಕ್ತಿಯೂ ಹೊರಟುಹೋಗುತ್ತದೆ. ತನ್ನಿಂದ ಸಂಘರ್ಷಣೆಯು ಉಂಟಾಗದಿದ್ದರೆ, ಆಗ ಶಕ್ತಿಯು ಉತ್ಪನ್ನವಾಗುತ್ತಾ ಹೋಗುತ್ತದೆ!

ಈ ಜಗತ್ತಿನಲ್ಲಿ ವೈರತ್ವದಿಂದಾಗಿ ಸಂಘರ್ಷಣೆಯು ಉಂಟಾಗುತ್ತದೆ. ಸಂಸಾರದ ಮೂಲ ಬೀಜವೇ ವೈರತ್ವವಾಗಿದೆ. ಯಾರೊಂದಿಗೆ ವೈರತ್ವವಿದೆ, ಅವರೊಂದಿಗೆ ಸಂಘರ್ಷಣೆಯಾಗುತ್ತದೆ. ಎರಡೂ ಅಂತ್ಯಗೊಂಡರೆ, ಆಗ ಅವರ ಮೋಕ್ಷವಾಗುತ್ತದೆ! ಪ್ರೇಮವು ಅಡ್ಡಿಪಡಿಸುವುದಿಲ್ಲ, ವೈರತ್ವ ಹೋದರೆ ಪ್ರೇಮವು ಉತ್ಪನ್ನವಾಗುತ್ತದೆ.

## ಕಾಮನ್ ಸೆನ್ಸ್ ಎವ್ರಿ-ವೇರ್ ಅಪ್ಲಿಕೇಬಲ್

ವ್ಯವಹಾರವನ್ನು ಶುದ್ಧವಾಗಿರಿಸಲು ಏನು ಮಾಡಬೇಕು? 'ಕಾಮನ್ ಸೆನ್ಸ್' ಕಂಪ್ಲೀಟ್ (ಸಂಪೂರ್ಣವಾಗಿ) ಇರಬೇಕು, ಸ್ಥಿರತೆ-ಗಂಭೀರತೆ ಇರಬೇಕು. ವ್ಯವಹಾರದಲ್ಲಿ ಕಾಮನ್ ಸೆನ್ಸ್ ಅವಶ್ಯವಾಗಿರಲೇ ಬೇಕು. 'ಕಾಮನ್ ಸೆನ್ಸ್' ಅಂದರೆ, 'ಎವ್ರಿ-ವೇರ್ ಅಪ್ಲಿಕೇಬಲ್' (ಎಲ್ಲೆಡೆಯೂ

ಉಪಯೋಗಿಸಬಹುದು), ಸ್ವರೂಪದ ಜ್ಞಾನದೊಂದಿಗೆ ಕಾಮನ್ ಸೆನ್ಸ್ ಇದ್ದುಬಿಟ್ಟರೆ ಇನ್ನು ಹೆಚ್ಚು ಪ್ರಜ್ವಲಿಸಬಹುದು.

**ಪ್ರಶ್ನಕರ್ತ:** 'ಕಾಮನ್ ಸೆನ್ಸ್' ಹೇಗೆ ಪ್ರಕಟಗೊಳ್ಳುತ್ತದೆ?

**ದಾದಾಶ್ರೀ:** 'ಕಾಮನ್ ಸೆನ್ಸ್' ಇದ್ದವರು, 'ಯಾರು ತನಗೆ ತೊಂದರೆ ಕೊಟ್ಟರೂ, ತಾನು ಯಾರಿಗೂ ತೊಂದರೆ ಕೊಡುವುದಿಲ್ಲ,' ಎನ್ನುವ ರೀತಿಯಲ್ಲಿ ನಡೆದುಕೊಳ್ಳುತ್ತಾರೆ. ಅಲ್ಲಿ ತಾನಾಗಿ ಯಾರಿಗೂ ತೊಂದರೆ ಕೊಡಬಾರದು, ಹಾಗೆ ಇರದೆ ಹೋದರೆ 'ಕಾಮನ್ ಸೆನ್ಸ್' ಹೊರಟುಹೋಗುತ್ತದೆ. ಸಂಘರ್ಷಣೆಯು ತನ್ನ ಕಡೆಯಿಂದಿರಬಾರದು. ಎದುರಿನವರು ಉಂಟುಮಾಡುವ ಸಂಘರ್ಷಣೆಯಿಂದ ನಮ್ಮಲ್ಲಿ ಕಾಮನ್ ಸೆನ್ಸ್ ಉತ್ಪನ್ನವಾಗುತ್ತದೆ. ಈ ಆತ್ಮದ ಶಕ್ತಿಯು ಹೇಗೆಂದರೆ, ಸಂಘರ್ಷಣೆಯ ಸಮಯದಲ್ಲಿ ಹೇಗೆ ವರ್ತಿಸಬೇಕು ಎಂಬ ಎಲ್ಲಾ ಉಪಾಯಗಳನ್ನು ತೋರಿಸುತ್ತದೆ ಹಾಗೂ ಆ ಜ್ಞಾನವು ಮತ್ತೆಂದೂ ಹೊರಟುಹೋಗುವುದಿಲ್ಲ. ಹೀಗೆ ಅಭ್ಯಾಸ ಮಾಡುತ್ತಾ ಇದ್ದರೆ, 'ಕಾಮನ್ ಸೆನ್ಸ್' ಹೆಚ್ಚುತ್ತಾ ಹೋಗುತ್ತದೆ. ಮುಖ್ಯವಾಗಿ ನಮ್ಮಲ್ಲಿ ಸಂಘರ್ಷಣೆಯು ಉಂಟಾಗಬಾರದು. ನಮ್ಮಲ್ಲಿ (ಜ್ಞಾನಿಗೆ) 'ಕಾಮನ್ ಸೆನ್ಸ್' ಬಹಳಷ್ಟಿದೆ, ಹಾಗಾಗಿ ನೀವು ಏನು ಕೇಳಬಯಸುತ್ತೀರೋ, ಅದು ತಕ್ಷಣವೇ ತಿಳಿದುಬಿಡುತ್ತದೆ. ಈ ಜನರು ಏನು ತಿಳಿಯುತ್ತಾರೆಂದರೆ, ಕೆಲವರು ದಾದಾರವರಿಗೆ ಅಹಿತವನ್ನು ಉಂಟುಮಾಡುತ್ತಿದ್ದಾರೆ ಎಂದು. ಆದರೆ ನಮಗೆ ತಕ್ಷಣ ತಿಳಿದುಬಿಡುತ್ತದೆ, ಅಹಿತವು ಅಹಿತವೇ ಅಲ್ಲ. ಅದು ಸಂಸಾರದ ಅಹಿತವೂ ಅಲ್ಲ ಅಥವಾ ಧಾರ್ಮಿಕದ ಅಹಿತವೂ ಅಲ್ಲ ಹಾಗೂ ಆತ್ಮಸಂಬಂಧದಲ್ಲಿ ಅಹಿತವಂತು ಅಲ್ಲವೇ ಅಲ್ಲ. ಲೋಕದ ಜನರಿಗೆ ಅನ್ನಿಸುತ್ತದೆ, ಅವರು ಆತ್ಮದ ಅಹಿತವನ್ನು ಮಾಡುತ್ತಿದ್ದಾರೆ ಎಂದು; ಆದರೆ, ನಾವು ಅದನ್ನು ಹಿತವೆಂದು ತಿಳಿಯುತ್ತೇವೆ. ಇದು 'ಕಾಮನ್ ಸೆನ್ಸ್'ನ ಪ್ರಭಾವವಾಗಿದೆ. ಅದರಿಂದಾಗಿ ನಾವು 'ಕಾಮನ್ ಸೆನ್ಸ್'ಗೆ ಅರ್ಥವನ್ನು ಬರೆದಿದ್ದೇವೆ 'ಎವ್ರಿ-ವೇರ್ ಅಪ್ಲಿಕೇಬಲ್' ಎಂದು. ಈಗಿನ ಪೀಳಿಗೆಯವರಲ್ಲಿ 'ಕಾಮನ್ ಸೆನ್ಸ್' ಎನ್ನುವ ವಸ್ತುವೇ ಇಲ್ಲ. ಪೀಳಿಗೆಯಿಂದ ಪೀಳಿಗೆಗೆ 'ಕಾಮನ್ ಸೆನ್ಸ್' ಕಡಿಮೆಯಾಗುತ್ತಲಿದೆ.

ನಮ್ಮ (ಆತ್ಮ) ವಿಜ್ಞಾನವನ್ನು ಪಡೆದ ಬಳಿಕ ವ್ಯಕ್ತಿಗೆ ಹಾಗಿರಲು ('ಕಾಮನ್ ಸೆನ್ಸ್'ಹೊಂದಿರಲು) ಸಾಧ್ಯವಾಗುತ್ತದೆ. ಅಲ್ಲದೆ ಸಾಮಾನ್ಯ ಜನರಲ್ಲೂ ಕೆಲವರಲ್ಲಿ ಆ ರೀತಿಯ ಕಾಮನ್ ಸೆನ್ಸ್ ಇರುತ್ತದೆ, ಅಂತಹ ಪುಣ್ಯಶಾಲಿ ಜನರೂ ಇರುತ್ತಾರೆ! ಆದರೂ ಅವರು ಕೆಲವೊಂದು ಸನ್ನಿವೇಶಗಳಲ್ಲಿ ಮಾತ್ರ 'ಕಾಮನ್ ಸೆನ್ಸ್'ಹೊಂದಿರುತ್ತಾರೆ, ಪ್ರತಿಯೊಂದು ಸನ್ನಿವೇಶಗಳಲ್ಲಿ ಇರಲಾಗುವುದಿಲ್ಲ.

**ಪ್ರಶ್ನಕರ್ತ:** ಎಲ್ಲಾ ಸಂಘರ್ಷಣೆಗಳಿಗೆ ಕಾರಣ, ಇದೇ ಆಗಿದೆಯಲ್ಲವೇ? ಒಂದು 'ಲೇಯರ್'ನಿಂದ ಮತ್ತೊಂದು 'ಲೇಯರ್'ಗೆ ಅಂತರವು ಬಹಳವಿರುತ್ತದೆ ಅಲ್ಲವೇ?

**ದಾದಾಶ್ರೀ:** ಜೀವನದಲ್ಲಿ ಎಷ್ಟು ಕ್ಲೇಶಗಳು ಉಂಟಾಗುತ್ತವೆ, ಸಂಘರ್ಷಣೆಗಳಾಗುತ್ತವೆ, ಅಷ್ಟು ಮೇಲಿನ ದರ್ಜೆಗೆ ಏರಲು ಅವಕಾಶವಾಗುತ್ತದೆ. ಸಂಘರ್ಷಣೆ ಇಲ್ಲದೆ ಹೋದರೆ, ಯಾವ ದರ್ಜೆಯಲ್ಲಿ ಇರುತ್ತಾರೋ ಅಲ್ಲೇ ಇದ್ದುಬಿಡುತ್ತಾರೆ. ಆದುದರಿಂದಲೇ ಜನರು ಸಂಘರ್ಷಣೆಗಳಿಗೆ ಅವಕಾಶದ ಹುಡುಕಾಟದಲ್ಲಿರುತ್ತಾರೆ.

## ಸಂಘರ್ಷಣೆಯಿಂದ ಪ್ರಗತಿಯ ಪಥದಲ್ಲಿ

**ಪ್ರಶ್ನಕರ್ತ:** ಸಂಘರ್ಷಣೆಯು ಪ್ರಗತಿಗಾಗಿ ಎಂದುಕೊಂಡು ಅದಕ್ಕಾಗಿ ಹುಡುಕಿದರೆ ಪ್ರಗತಿ ಉಂಟಾಗುತ್ತದೆಯೇ?

**ದಾದಾಶ್ರೀ:** ಆದರೆ, ಅಲ್ಲಿ ತಿಳಿದುಕೊಂಡು ಹುಡುಕುವುದಿಲ್ಲ! ಭಗವಂತನು ಯಾವ ಎತ್ತರಕ್ಕೂ ಕರೆದುಕೊಂಡು ಹೋಗುವುದಿಲ್ಲ, ಸಂಘರ್ಷಣೆಗಳು ಎತ್ತರಕ್ಕೆ ಕರೆದೊಯ್ಯುತ್ತವೆ. ಅಲ್ಲದೆ ಸಂಘರ್ಷಣೆಗಳು ಒಂದು ಹಂತದವರೆಗೆ ಮಾತ್ರ ಕೊಂಡೊಯ್ಯುತ್ತವೆ, ನಂತರ ಜ್ಞಾನವು ಲಭ್ಯವಾದರೆ ಮಾತ್ರ ಕೆಲಸವಾಗುವುದು. ಸಂಘರ್ಷಣೆಯು ನೈಸರ್ಗಿಕವಾಗಿ ನಡೆಯುತ್ತದೆ. ಹೇಗೆ ನದಿಯಲ್ಲಿ ಕಲ್ಲುಗಳು ಇಲ್ಲಿಂದ ಅಲ್ಲಿಗೆ ಹೊಡೆದುಕೊಂಡು ಸವೆದು ಸವೆದು ನುಣುಪಾದ ಗೋಳಾಕಾರವಾಗಿವೆಯಲ್ಲ ಹಾಗೆ.

**ಪ್ರಶ್ನಕರ್ತ:** ಘರ್ಷಣೆ ಹಾಗೂ ಸಂಘರ್ಷಣೆಯ ವ್ಯತ್ಯಾಸವೇನು?

**ದಾದಾಶ್ರೀ:** ಜೀವವಿಲ್ಲದ ವಸ್ತುಗಳು ಒಂದಕ್ಕೊಂದು ಹೊಡೆದು ಕೊಂಡರೆ ಘರ್ಷಣೆಯು ಉಂಟಾಗುತ್ತದೆ ಹಾಗೂ ಜೀವಿಗಳು ಹೊಡೆದಾಡಿ ಕೊಂಡರೆ ಸಂಘರ್ಷಣೆಯು ಉಂಟಾಗುತ್ತದೆ.

**ಪ್ರಶ್ನಕರ್ತ:** ಸಂಘರ್ಷದಿಂದ ಆತ್ಮಶಕ್ತಿಯು ನಿಂತುಹೋಗುತ್ತದೆ ಅಲ್ಲವೇ?

**ದಾದಾಶ್ರೀ:** ಹೌದು, ಆ ಮಾತು ನಿಜ. ಸಂಘರ್ಷಣೆಯು ಉಂಟಾದರೆ ತೊಂದರೆಯಿಲ್ಲ. ಆದರೆ ನಾವು 'ಸಂಘರ್ಷಣೆಯನ್ನು ಉಂಟು ಮಾಡಬೇಕು' ಎಂಬ ಭಾವನೆಯನ್ನು ತೆಗೆದು ಹಾಕಬೇಕೆಂದು, ನಾನು ಹೇಳುವುದು. 'ನಮಗೆ' ಸಂಘರ್ಷಣೆಯ ಭಾವವು ಇರಬಾರದು, ನಂತರ 'ಚಂದುಭಾಯ್' ಸಂಘರ್ಷಕ್ಕೆ ಒಳಗಾಗುವುದಾದರೆ ಆಗಲಿ, ಆದರೆ ನಮ್ಮ ಭಾವನೆಯು ಆತ್ಮಶಕ್ತಿಯನ್ನು ಸ್ಥಗಿತಗೊಳಿಸುವಂತಾಗಬಾರದು.

# ಸಂಘರ್ಷಣೆಯನ್ನು ಮಾಡಿಸುತ್ತದೆ ಪ್ರಕೃತಿಯು

**ಪ್ರಶ್ನಕರ್ತ:** ಸಂಘರ್ಷಣೆಯನ್ನು ಯಾವುದು ಮಾಡಿಸುತ್ತದೆ, ಜಡವೋ ಅಥವಾ ಚೇತನವೋ?

**ದಾದಾಶ್ರೀ:** ಹಿಂದಿನ ಸಂಘರ್ಷಣೆಯೇ ಈಗ ಸಂಘರ್ಷಣೆಯನ್ನು ಮಾಡಿಸುತ್ತದೆ. ಜಡವೋ ಅಥವಾ ಚೇತನವೋ ಎನ್ನುವ ಪ್ರಶ್ನೆಯೇ ಇಲ್ಲ. ಆತ್ಮವು ಅದರಲ್ಲಿ ಕೈಹಾಕುವುದಿಲ್ಲ. ಈ ಎಲ್ಲಾ ಸಂಘರ್ಷಣೆಗಳನ್ನು 'ಪುದ್ಗಲ್' ಮಾಡಿಸುತ್ತದೆ. ಆದರೆ, ಯಾವ ಹಿಂದಿನ ಸಂಘರ್ಷಣೆ ಇತ್ತೋ, ಅದೇ ಈಗ ಮತ್ತೆ ಸಂಘರ್ಷಣೆಯನ್ನು ಮಾಡಿಸುತ್ತದೆ. ಯಾರಿಗೆ ಹಿಂದಿನ ಸಂಘರ್ಷಣೆಗಳು ಪೂರ್ಣಗೊಂಡಿವೆ, ಅವರಿಗೆ ಮತ್ತೆ ಸಂಘರ್ಷಣೆಯು ಉಂಟಾಗುವುದಿಲ್ಲ. ಇಲ್ಲವಾದರೆ ಸಂಘರ್ಷಣೆಯ ಮೇಲೆ ಸಂಘರ್ಷಣೆ, ಮತ್ತೆ ಮೇಲಿಂದ ಮೇಲೆ ಸಂಘರ್ಷಣೆ ಹೀಗೆ ಹೆಚ್ಚಾಗುತ್ತಲೇ ಹೋಗುತ್ತದೆ.

ಪುದ್ಗಲ್ ಅಂದರೆ, ಅದು ಸಂಪೂರ್ಣ ಜಡವಲ್ಲ, ಅದು ಮಿಶ್ರ ಚೇತನವಾಗಿದೆ. ಅದನ್ನು 'ವಿಭಾವಿಕ್ ಪುದ್ಗಲ್' ಎಂದು ಕರೆಯಲಾಗುತ್ತದೆ. ವಿಭಾವಿಕ್ ಅಂದರೆ, ವಿಶೇಷ ಭಾವದಿಂದ ಪರಿಣಮಿಸಿರುವ ಪುದ್ಗಲ್; ಈ ಎಲ್ಲವನ್ನು ಮಾಡಿಸುತ್ತದೆ. ಯಾವ ಶುದ್ಧ ಪುದ್ಗಲ್ ಇದೆ, ಆ ಪುದ್ಗಲ್ ಹಾಗೇನು ಮಾಡಿಸುವುದಿಲ್ಲ. ಈ ಪುದ್ಗಲ್ ಮಿಶ್ರ ಚೇತನದಿಂದ ಉಂಟಾಗಿದೆ; ಅದರಲ್ಲಿ ಆತ್ಮದ ವಿಶೇಷ ಭಾವ ಹಾಗೂ ಜಡದ ವಿಶೇಷ ಭಾವ, ಈ ಎರಡೂ ಸೇರಿಕೊಂಡು ಮೂರನೆಯ ರೂಪವನ್ನು ಹೊಂದಿರುವ, ಪ್ರಕೃತಿ ಸ್ವರೂಪವು, ಈ ಎಲ್ಲಾ ಘರ್ಷಣೆಗಳನ್ನು ಮಾಡಿಸುತ್ತದೆ.

**ಪ್ರಶ್ನಕರ್ತ:** ಸಂಘರ್ಷಣೆಯನ್ನು ಉಂಟುಮಾಡದೆ ಹೋದರೆ, ಆಗ ನಿಜವಾದ ಅಹಿಂಸೆಯ ಭಾವನೆಯು ಮೂಡಿದೆ ಎಂದು ಪರಿಗಣಿಸಬಹುದೇ?

**ದಾದಾಶ್ರೀ:** ಇಲ್ಲ, ಹಾಗೇನೂ ಇಲ್ಲ. ಆದರೆ, ಈ 'ದಾದಾ'ನಿಂದ ತಿಳಿಯಲಾಯಿತೇನೆಂದರೆ, ಆ ಗೋಡೆಯೊಂದಿಗೆ ಸಂಘರ್ಷಣೆಗೆ ಒಳಪಡುವುದರಿಂದ ಇಷ್ಟೊಂದು ಲಾಭ(!) ಇನ್ನು ಭಗವಂತನ ಜೊತೆ ಸಂಘರ್ಷಣೆಯನ್ನು ಮಾಡುವುದರಿಂದ ಇನ್ನೆಷ್ಟು ಲಾಭ?! ಯಾವುದರಿಂದ ಹಾನಿ ಉಂಟಾಗುತ್ತದೆ ಎನ್ನುವ ತಿಳುವಳಿಕೆಯಿಂದಲೇ ನಿಮ್ಮೊಳಗೆ ಪರಿವರ್ತನೆಯು ಪ್ರಾರಂಭವಾಗಿಬಿಡುತ್ತದೆ.

ಅಹಿಂಸೆಯೆನ್ನುವುದು ಸಂಪೂರ್ಣವಾದ ತಿಳುವಳಿಕೆಯಲ್ಲ, ಹಾಗೂ ಅದನ್ನು ಸಂಪೂರ್ಣವಾಗಿ ತಿಳಿದುಕೊಳ್ಳುವುದು ಕೂಡಾ ಬಹಳ ಕಷ್ಟಕರವಾಗಿದೆ. ಆದುದರಿಂದ ಹಾಗೆ ಮಾಡುವ ಬದಲು, 'ಸಂಘರ್ಷಣೆಗೆ ಎಂದೂ ಮುಂದಾಗಬಾರದು' ಎನ್ನುವುದನ್ನು

ಹಿಡಿದುಕೊಂಡರೆ ಸಾಕು, ಇದರಿಂದ ಬಹಳಷ್ಟು ಶಕ್ತಿಯನ್ನು ಹೊಂದಲಾಗುತ್ತದೆ ಹಾಗೂ ದಿನದಿಂದ ದಿನಕ್ಕೆ ವೃದ್ಧಿಯಾಗುತ್ತಾ ಹೋಗುತ್ತದೆ ಹಾಗೂ ಸಂಘರ್ಷಣೆಯಿಂದಾಗುತ್ತಿದ್ದ ಹಾನಿಯು ಇನ್ನೆಂದೂ ಉಂಟಾಗುವುದಿಲ್ಲ! ಕೆಲವೊಮ್ಮೆ ಸಂಘರ್ಷಣೆಯು ಉಂಟಾದರೂ, ಆ ಸಂಘರ್ಷಣೆಯ ನಂತರ ನಾವು ಪ್ರತಿಕ್ರಮಣವನ್ನು ಮಾಡಿಬಿಟ್ಟರೆ, ಆಗ ಅದು ಅಳಿಸಿಹೋಗುತ್ತದೆ. ಆದುದರಿಂದ ಇದನ್ನು ಅರಿತುಕೊಳ್ಳಬೇಕು ಏನೆಂದರೆ, ಇನ್ನು ಮುಂದೆ ಸಂಘರ್ಷಣೆಯು ಉಂಟಾದರೆ, ಆಗ ತಕ್ಷಣವೇ ಪ್ರತಿಕ್ರಮಣವನ್ನು ಮಾಡಿಬಿಡಬೇಕು; ಇಲ್ಲವಾದರೆ ಬಹಳ ಜವಾಬ್ದಾರಿಯಾಗಿದೆ. ಈ ಜ್ಞಾನದಿಂದ ಮೋಕ್ಷಕ್ಕೆ ಹೋಗಲಾಗುತ್ತದೆ, ಆದರೆ ಸಂಘರ್ಷಣೆಯಿಂದ ಮೋಕ್ಷದ ಹಾದಿಯಲ್ಲಿ ಬಹಳಷ್ಟು ತೊಂದರೆಗಳು ಉಂಟಾಗುತ್ತದೆ ಹಾಗೂ ತಡವಾಗುತ್ತದೆ.

ಈ ಗೋಡೆಯ (ನಿರ್ಜೀವದ) ಬಗ್ಗೆ ಕೆಟ್ಟ ವಿಚಾರಗಳು ಬಂದರೂ ಪರವಾಗಿಲ್ಲ, ಕಾರಣವೇನೆಂದರೆ ಅಲ್ಲಿ ಒಬ್ಬರಿಗೆ ಮಾತ್ರ (ಏಕಪಕ್ಷಿ) ನಷ್ಟವಾಗುತ್ತದೆ. ಆದರೆ ಜೀವಂತ ವ್ಯಕ್ತಿಗಳ ಬಗ್ಗೆ ಒಂದೇಒಂದು ಕೆಟ್ಟ ವಿಚಾರವನ್ನು ಹೊಂದಿದ್ದರೂ ಸಹ ಬಹಳ ಬಾಧಕವಾಗಿದೆ. ಅಲ್ಲಿ ಇಬ್ಬರಿಗೂ ಹಾನಿ ಉಂಟಾಗುತ್ತದೆ. ಆದರೆ ನಾವುಗಳು, ಆ ವಿಚಾರದ ಹಿಂದೆಯೇ ಪ್ರತಿಕ್ರಮಣವನ್ನು ಮಾಡಿಬಿಟ್ಟರೆ, ಆಗ ಎಲ್ಲಾ ದೋಷಗಳು ಹೊರಟುಹೋಗುತ್ತವೆ. ಆದುದರಿಂದ ಎಲ್ಲೆಲ್ಲಿ ಸಂಘರ್ಷಣೆಗಳು ಉಂಟಾಗುತ್ತವೆ, ಅವುಗಳಿಗೆ ಪ್ರತಿಕ್ರಮಣವನ್ನು ಆಗಿಂದಾಗಲೇ ಮಾಡುವುದರಿಂದ ಸಂಘರ್ಷಣೆಗಳು ನಾಶವಾಗಿಬಿಡುತ್ತವೆ.

## ಸಮಾಧಾನವು, ಸಮ್ಯಕ್ ಜ್ಞಾನದಿಂದ

**ಪ್ರಶ್ನಕರ್ತ:** ದಾದಾ, ಈ ಅಹಂಕಾರದ ವಿಚಾರವು ಹೆಚ್ಚಾಗಿ ಮನೆಯಲ್ಲಿ ಅನ್ವಯಿಸುತ್ತದೆ, ಸಂಸಾರದಲ್ಲಿ ಅನ್ವಯಿಸುತ್ತದೆ, ದಾದಾರವರ ಕೆಲಸವನ್ನು ಮಾಡುತ್ತಿರುವಾಗ, ಅಲ್ಲಿ ಕೂಡಾ ಎಲ್ಲೋ ಒಂದೆಡೆ ಅಹಂಕಾರಗಳ ನಡುವೆ ಸಂಘರ್ಷಣೆ ಉಂಟಾಗುತ್ತದೆ, ಆಗ ಅಲ್ಲಿಯೂ ಅನ್ವಯಿಸುತ್ತದೆ. ಅಲ್ಲಿ ಕೂಡಾ ಸಮಾಧಾನ ಬೇಕಲ್ಲವೇ?

**ದಾದಾಶ್ರೀ:** ಹೌದು, ಸಮಾಧಾನ ಬೇಕಲ್ಲವೇ! ನಾವುಗಳು ಜ್ಞಾನವನ್ನು ಹೊಂದಿರುವವರು ಸಮಾಧಾನವನ್ನು ತೆಗೆದುಕೊಳ್ಳುತ್ತೇವೆ. ಆದರೆ, ಜ್ಞಾನವಿಲ್ಲದೆ ಇರುವವರು ಹೇಗೆ ಸಮಾಧಾನವನ್ನು ತೆಗೆದುಕೊಳ್ಳುವುದು? ಅವರಲ್ಲಿ ನಂತರ ಭಿನ್ನತೆ ಉಂಟಾಗುತ್ತಾ ಹೋಗುತ್ತದೆ, ಮನಸ್ಸಿನಲ್ಲಿ ಕೂಡಾ ಅವರೊಂದಿಗೆ ಭೇದ ಉಂಟಾಗುತ್ತಾ ಹೋಗುತ್ತದೆ. ನಮಗೆ ಇಲ್ಲಿ ಭೇದವು ಉಂಟಾಗುವುದಿಲ್ಲ.

**ಪ್ರಶ್ನಕರ್ತ:** ಆದರೆ ದಾದಾ, ಸಂಘರ್ಷಣೆಯು ಉಂಟಾಗಬಾರದು ಅಲ್ಲವೇ?

**ದಾದಾಶ್ರೀ:** ಸಂಘರ್ಷಣೆ ಉಂಟಾಗುತ್ತದೆ, ಅದು ಸ್ವಾಭಾವಿಕವಾಗಿದೆ. ಅಲ್ಲಿಂದ (ಹೋದ ಜನ್ಮದಿಂದ) ಮಾಲು ಯಾವುದು ತುಂಬಿಸಿಕೊಂಡು ತರಲಾಗಿದೆ, ಅದರಿಂದ ಸಂಘರ್ಷಣೆಗಳಾಗುತ್ತವೆ. ಅಂತಹ ಮಾಲು ತರದೇ ಹೋಗಿದ್ದರೆ, ಆಗ ಹಾಗಾಗುತ್ತಿರಲಿಲ್ಲ. ಆದುದರಿಂದ, ಅಲ್ಲಿ ನಾವು ಅರಿತುಕೊಳ್ಳಬೇಕೇನೆಂದರೆ, 'ಆ ಸಹೋದರನ (ಹೋದ ಜನ್ಮದ ಮಾಲು) ಅಭ್ಯಾಸವೇ ಅಂತಹದ್ದಾಗಿದೆ', ಹಾಗೆಂದು ನಾವು ಅರ್ಥಮಾಡಿಕೊಳ್ಳಬೇಕು. ನಂತರ, ನಮಗೆ ಅದರಿಂದ ಯಾವ ಪರಿಣಾಮವು ಉಂಟಾಗುವುದಿಲ್ಲ. ಕಾರಣವೇನೆಂದರೆ, ಅಭ್ಯಾಸವು ಅಭ್ಯಾಸದವನದ್ದು (ಹೋದ ಜನ್ಮದ ಸಂಸ್ಕಾರವನ್ನು ಹೊಂದಿರುವವನದ್ದು) ಹಾಗೂ 'ನಾವು' ನಮ್ಮವನದ್ದು (ಶುದ್ಧಾತ್ಮ)! ಆಮೇಲೆ ಉಳಿದಿರುವುದೆಲ್ಲಾ ವಿಲೇವಾರಿಯಾಗುತ್ತದೆ. ನೀವು ಅಲ್ಲಿಯೇ ಅದರೊಂದಿಗೆ (ಹೋದ ಜನ್ಮದ ಅಭ್ಯಾಸದೊಂದಿಗೆ) ಇದ್ದುಬಿಟ್ಟರೆ, ಆಗ ತೊಂದರೆಯಾಗುತ್ತದೆ. ಸಿಕ್ಕಿಕೊಳ್ಳದೆ ಹೋದರೆ ತೊಂದರೆಯಿಲ್ಲ. ಅದಲ್ಲದೆ ಸಂಘರ್ಷಣೆಯಂತೂ ಉಂಟಾಗುತ್ತಲೇ ಇರುತ್ತದೆ. ಸಂಘರ್ಷಣೆಯಾಗದೆ ಇರಲು ಸಾಧ್ಯವಿಲ್ಲ! ಈ ಸಂಘರ್ಷಣೆಯಿಂದಾಗಿ, ಒಬ್ಬರು ಮತ್ತೊಬ್ಬರೊಡನೆ ಭಿನ್ನತೆಯನ್ನು ಹೊಂದದಂತೆ ನೋಡಿಕೊಳ್ಳಬೇಕು. ಇದಂತೂ ಪತಿ-ಪತ್ನಿಯೊಂದಿಗೆ ಸದಾ ನಡೆಯುತ್ತದೆ. ಆದರೂ ಅವರು ಹೊಂದಿಕೊಂಡು ಬಾಳುತ್ತಾರಲ್ಲವೇ? ಸಂಘರ್ಷಣೆ ಆಗುತ್ತದೆ, ಅಲ್ಲಿ ಸಂಘರ್ಷಣೆಯನ್ನು ಮಾಡಲೇ ಬಾರದು ಎಂದು ಯಾರೂ ಯಾರ ಮೇಲೂ ಯಾವುದೇ ಒತ್ತಡವನ್ನು ಹಾಕಬಾರದು.

**ಪ್ರಶ್ನಕರ್ತ:** ಆದರೆ ದಾದಾ, ಸಂಘರ್ಷಣೆ ಉಂಟಾಗಲೇ ಬಾರದು ಎನ್ನುವ ಭಾವವು ಸತತವಾಗಿ ಇರಬೇಕಲ್ಲವೇ?

**ದಾದಾಶ್ರೀ:** ಹೌದು, ಇರಬೇಕು. ಅದನ್ನೇ ಮಾಡಬೇಕಾಗಿರುವುದಲ್ಲವೇ! ಅವರ ಪ್ರತಿಕ್ರಮಣವನ್ನು ಮಾಡಬೇಕು ಹಾಗೂ ಅವರ ಬಗ್ಗೆ ಒಳ್ಳೆಯ ಭಾವನೆಯನ್ನು ಇಟ್ಟುಕೊಳ್ಳಬೇಕು. ಅದೇ ರೀತಿಯ ಮನಸ್ತಾಪವಾದರೆ, ಮತ್ತೆ ಪ್ರತಿಕ್ರಮಣ ಮಾಡಬೇಕು. ಕಾರಣವೇನೆಂದರೆ, ಒಂದು ಪದರ ಕಳಚಿದರೆ, ನಂತರದ ಪ್ರತಿಕ್ರಮಣವು ಮತ್ತೊಂದು ಪದರವನ್ನು ಕಳಚುವಂತೆ ಮಾಡುತ್ತದೆ, ಅಭಿಪ್ರಾಯಗಳು ಬಹಳ ಪದರಗಳನ್ನು ಉಳ್ಳವುಗಳಲ್ಲವೇ? ನಾವಂತೂ ಯಾವಾಗೆಲ್ಲಾ ನಮ್ಮೊಂದಿಗೆ ಸಂಘರ್ಷಣೆಯಾಗುತ್ತಿತ್ತು. ಆಗ, 'ಇವತ್ತು ಒಳ್ಳೆಯ ಜ್ಞಾನ ದೊರಕಿತು!' ಎಂದು ಅದನ್ನು ನೋಂದಾಯಿಸಿ ಕೊಳ್ಳುವುದರೊಂದಿಗೆ, ಎಲ್ಲಿಯೂ ಸಂಘರ್ಷಣೆಯಿಂದ ಮುಗ್ಗರಿಸಿ ಬೀಳುತ್ತಿರಲಿಲ್ಲ. ಜಾಗೃತವಾಗಿ, ಜಾಗೃತಿಯಲ್ಲೇ ಇರುತ್ತಿದ್ದೆವು. ಸಂಘರ್ಷಣೆಯು ಆತ್ಮದ ವಿಟಮಿನ್ ಆಗಿದೆ. ಹಾಗಾಗಿ ಇಲ್ಲಿ

ಸಂಘರ್ಷಣೆಯಿಂದಾಗುವ ತೊಂದರೆಯಲ್ಲ. ಸಂಘರ್ಷಣೆಯ ನಂತರ ಒಬ್ಬರು ಮತ್ತೊಬ್ಬರೊಡನೆ ಭಿನ್ನತೆಯನ್ನು ಹೊಂದದೆ ಇರುವುದೇ ಪುರುಷಾರ್ಥವಾಗಿದೆ. ನಮ್ಮ ಮನಸ್ಸು ಮತ್ತೊಬ್ಬರ ಬಗ್ಗೆ ಭೇದವನ್ನು ಮೂಡಿಸುತ್ತಿದ್ದರೆ, ಆಗ ಪ್ರತಿಕ್ರಮಣ ಮಾಡಿಸಿ, ದಾರಿಗೆತರಬೇಕು. ನಮಗೆ (ಜ್ಞಾನಿಗೆ) ಎಲ್ಲರೊಂದಿಗೆ ಯಾವ ರೀತಿಯಲ್ಲಿ ಹೊಂದಾಣಿಕೆಯು ಸಾಧ್ಯವಾಗಿರಬಹುದು? ನಿಮ್ಮೊಂದಿಗೂ ಹೊಂದಾಣಿಕೆ ಇದೆಯೋ, ಇಲ್ಲವೋ? ಶಬ್ದಗಳಿಂದ ಸಂಘರ್ಷಣೆಯು ಉಂಟಾಗುತ್ತದೆ. ನಾನು ಹೆಚ್ಚು ಮಾತನಾಡಬೇಕಾಗುತ್ತದೆ, ಆದರೂ ಸಂಘರ್ಷಣೆಯು ಉಂಟಾಗುವುದಿಲ್ಲ ಅಲ್ಲವೇ!

ಸಂಘರ್ಷಣೆಯಂತೂ ಉಂಟಾಗುವುದೇ ಆಗಿದೆ. ಘರ್ಷಣೆಯಿಂದಾಗಿ ಮನೆಯಲ್ಲಿನ ಪಾತ್ರೆಗಳು ಶಬ್ದವನ್ನು ಮಾಡುತ್ತವೆಯೋ, ಇಲ್ಲವೋ? ಸಂಘರ್ಷಣೆಯು 'ಪುದ್ಗಲ್'ನ ಸ್ವಭಾವವಾಗಿದೆ. ಆದರೆ, ಮಾಲು ತುಂಬಿಕೊಂಡು ತಂದಿದ್ದರೆ ಮಾತ್ರ, ತುಂಬಿಸಿಕೊಂಡಿಲ್ಲದಿದ್ದರೆ ಏನಿಲ್ಲ. ನಮಗೆ ಎಲ್ಲಿಯೂ ಸಂಘರ್ಷಣೆಯು ಉಂಟಾಗುವುದಿಲ್ಲ. ಅದೂ, ಈ ಜ್ಞಾನವು ಪ್ರಾಪ್ತಿಯಾದ ಬಳಿಕ ಸಂಘರ್ಷಣೆಗಳಿಲ್ಲ. ಅದಕ್ಕೆ ಕಾರಣವೇನೆಂದರೆ, ಈ ನಮ್ಮ ಜ್ಞಾನ, ಇದು ಅನುಭವದ ಜ್ಞಾನವಾಗಿದೆ ಹಾಗೂ ನಾವು ಈ ಜ್ಞಾನದಿಂದಲೇ ಎಲ್ಲವನ್ನು ಖಾಲಿ ಮಾಡಿ, ಮಾಡಿ ಬಂದಿರುವುದಾಗಿದೆ. ನಿಮಗೆ ಇನ್ನೂ ಖಾಲಿ ಮಾಡುವುದು ಉಳಿದಿದೆ.

## ದೋಷವನ್ನು ತೊಳೆಯಲಾಗುತ್ತದೆ, ಪ್ರತಿಕ್ರಮಣದಿಂದ

ಯಾರಾದರೂ ಸಂಘರ್ಷಣೆಯನ್ನು ಉಂಟುಮಾಡಿದರೆ, ಆಗ ದೋಷವು ಕಾಣಿಸಲು ಪ್ರಾರಂಭವಾಗುತ್ತದೆ ಹಾಗೂ ಸಂಘರ್ಷಣೆಗಳು ನಡೆಯದೆ ಹೋದರೆ, ಅಲ್ಲಿ ದೋಷಗಳು ಕಾಣಿಸದಂತಿರುತ್ತವೆ. ಹಾಗಾಗಿ ಸಂಘರ್ಷಣೆಗಳಿಂದ ದಿನವೂ ಐವತ್ತು-ಐವತ್ತು ದೋಷಗಳು ಕಂಡರೆ, ಆಗ ತಿಳಿಯ ಬೇಕೇನೆಂದರೆ, ಪೂರ್ಣಾಹುತಿಯ ಸಮೀಪಕ್ಕೆ ಬರಲಾಗುತ್ತಿದೆ ಎಂದು.

ಆದುದರಿಂದ, ಎಲ್ಲೆಲ್ಲಿ ಸಂಘರ್ಷಣೆಗಳು ಉಂಟಾಗುತ್ತವೆ, ಅಲ್ಲಿ ಅವುಗಳನ್ನು ತಪ್ಪಿಸಿ. ಸಂಘರ್ಷಣೆಗಳನ್ನು ಮಾಡಿಕೊಂಡು ಈಗಿರುವ ಲೋಕವನ್ನಂತೂ ಹಾಳುಮಾಡಲಾಗುತ್ತಿದೆ ಜೊತೆಗೆ ಪರಲೋಕವನ್ನೂ ಕೂಡಾ ಹಾಳುಮಾಡುವುದಾಗಿದೆ. ಯಾವುದು ಈ ಲೋಕವನ್ನು ಹಾಳು ಮಾಡುತ್ತದೆ, ಅದು ಪರಲೋಕವನ್ನೂ ಹಾಳು ಮಾಡದೆ ಬಿಡುವುದಿಲ್ಲ. ಈ ಲೋಕವು ಸುಧಾರಣೆಗೊಂಡರೆ, ಪರಲೋಕವೂ ಸುಧಾರಿಸುವುದು. ಈ ಜನ್ಮದಲ್ಲಿ ನಮಗೆ ಯಾವುದೇ ರೀತಿಯ ಸಂಘರ್ಷಣೆಗಳು ಉಂಟಾಗದೆ ಇದ್ದರೆ, ಆಗ ತಿಳಿಯಬೇಕು ಮುಂದಿನ ಜನ್ಮದಲ್ಲಿ ಯಾವುದೇ ರೀತಿಯಾದ ಸಂಘರ್ಷಣೆಯೇ ಇರುವುದಿಲ್ಲ ಎಂದು. ಅಲ್ಲದೆ, ಈಗ ಸಂಘರ್ಷಣೆಯನ್ನು ಉಂಟುಮಾಡಿದರೆ, ಅದು ಅಲ್ಲಿಗೆ ಬರುವುದೇ ಆಗಿದೆ.

## ಮೂರು ಜನ್ಮದಲ್ಲಿ ಗ್ಯಾರೆಂಟಿ...

ಸಂಘರ್ಷಣೆಯು ಉಂಟಾಗದೆ ಹೋದರೆ, ಅವರಿಗೆ ಮೂರು ಜನ್ಮದಲ್ಲೇ ಮೋಕ್ಷವು ಪ್ರಾಪ್ತಿಯಾಗುತ್ತದೆ ಎನ್ನುವ ಗ್ಯಾರೆಂಟಿಯನ್ನು ನಾನು ಕೊಡುತ್ತೇನೆ. ಸಂಘರ್ಷಣೆಯು ಉಂಟಾದರೆ ಪ್ರತಿಕ್ರಮಣವನ್ನು ಮಾಡಬೇಕು. ಸಂಘರ್ಷಣೆಯು 'ಪುದ್ಗಲ್'ನದ್ದಾಗಿದೆ ಹಾಗೂ 'ಪುದ್ಗಲ್-ಪುದ್ಗಲ್'ನ ಸಂಘರ್ಷಣೆಯು, ಪ್ರತಿಕ್ರಮಣದಿಂದ ನಾಶವಾಗುತ್ತದೆ.

ಮೊದಲಿನ ಭಾವನೆಯು ಭಾಗಾಕಾರ ಮಾಡುತ್ತಿದ್ದರೆ, ಆಗ ನಾವು ಈಗಿರುವ ಭಾವನೆಯಿಂದ ಗುಣಾಕಾರ ಮಾಡಬೇಕು. ಅದರಿಂದಾಗಿ ಲೆಕ್ಕವು ಮುಗಿದುಹೋಗುತ್ತದೆ. ಯಾವುದೇ ವ್ಯಕ್ತಿಯ ಬಗ್ಗೆ ವಿಚಾರಗಳು ಬರಲಾರಂಭಿಸುತ್ತವೆ, 'ನನಗೆ ಅವರು ಹೀಗೆ ಹೇಳಿದರು, ಹಾಗೆ ಹೇಳಿದರು' ಎಂದು, ಅದೇ ನಮ್ಮ ತಪ್ಪಾಗಿದೆ. ನಡೆದುಕೊಂಡು ಹೋಗುವಾಗ, ಗೋಡೆಗೆ ಹೊಡೆದುಕೊಂಡರೆ, ಆಗ ಯಾಕೆ ಅದನ್ನು ನಿಂದಿಸುವುದಿಲ್ಲ? ವೃಕ್ಷವನ್ನು ಜಡವೆಂದು (ಅದರಲ್ಲಿಯೂ ಜೀವವಿದೆ) ಹೇಗೆ ಕರೆಯುವುದು? ಹಾಗಾಗಿ, ಯಾವುದರಿಂದ ಪೆಟ್ಟಾಗುತ್ತದೆ, ಅದು ಹಸಿರು ಮರವೇ ಆಗಿದೆ! ಹಸುವಿನ ಕಾಲು ನಮಗೆ ತಾಗಿದರೆ, ಆಗ ನಾವೇನಾದರೂ ಹೇಳಲಾಗುತ್ತದೆಯೇ? ಹಾಗೆಯೇ ಈ ಎಲ್ಲಾ ಜನರು. 'ಜ್ಞಾನಿ ಪುರುಷ'ರು ಯಾವ ರೀತಿಯಲ್ಲಿ ಎಲ್ಲರನ್ನೂ ಕ್ಷಮಿಸುತ್ತಾರೆ? ಅವರು ತಿಳಿಯುತ್ತಾರೆ, 'ಆ ಬಡಪಾಯಿಗೆ ತಿಳುವಳಿಕೆ ಇಲ್ಲ, ವೃಕ್ಷದ ಹಾಗೆ' ಎಂದು. ತಿಳುವಳಿಕೆಯುಳ್ಳವರಿಗೆ ಏನ್ನನ್ನೂ ಹೇಳಬೇಕಾಗಿಯೇ ಇಲ್ಲ, ಅವರುಗಳು ತಕ್ಷಣ ಪ್ರತಿಕ್ರಮಣವನ್ನು ಮಾಡಿಬಿಡುತ್ತಾರೆ.

## ಆಸಕ್ತಿ ಎಲ್ಲಿದೆಯೋ ಅಲ್ಲಿ 'ರಿಯಾಕ್ಷನ್'ನ್ನೇ..

**ಪ್ರಶ್ನಕರ್ತ:** ಎಷ್ಟೋಂದು ಸಲ ನಮಗೆ ದ್ವೇಷವನ್ನು ಮಾಡಬೇಕೆಂದು ಇರುವುದಿಲ್ಲ, ಆದರೂ ದ್ವೇಷವು ಉಂಟಾಗಿ ಬಿಡುತ್ತದೆ, ಅದಕ್ಕೇನು ಕಾರಣ?

**ದಾದಾಶ್ರೀ:** ಯಾರ ಜೊತೆಯಲ್ಲಿ?

**ಪ್ರಶ್ನಕರ್ತ:** ಕೆಲವೋಮ್ಮೆ ಗಂಡನೊಂದಿಗೆ ಉಂಟಾದಾಗ?

**ದಾದಾಶ್ರೀ:** ಅದನ್ನು ದ್ವೇಷವೆಂದು ಕರೆಯುವುದಿಲ್ಲ. ಯಾವಾಗಲು ಯಾವ ಈ ಆಸಕ್ತಿಯ ಪ್ರೇಮವಿದೆ, ಅದು 'ರಿಯಾಕ್ಷನರಿ' ಆಗಿದೆ. ಹಾಗಾಗಿ ಮನೆಯವರು ಏನಾದರು ನಿಂದನೆ ಮಾಡಿದರೆ ಸಾಕು, ಆಗ ಒರಟಾಗಿ ವರ್ತಿಸುವುದಾಗಿದೆ. ಆ ವರ್ತನೆಯು ಸ್ವಲ್ಪ ಸಮಯದವರೆಗೆ

ಮಾತ್ರ ಇರುತ್ತದೆ ನಂತರ ಅವರ ಮೇಲೆ ಪ್ರೇಮವು ಉಂಟಾಗುತ್ತದೆ. ಮತ್ತೆ ಪ್ರೇಮದಿಂದ ಪೆಟ್ಟು ಬಿದ್ದಾಗ ಸಂಘರ್ಷಣೆಯು ಪ್ರಾರಂಭವಾಗುತ್ತದೆ. ಅದೇ ಮತ್ತೆ ಸ್ವಲ್ಪ ಸಮಯದ ನಂತರ ಪ್ರೇಮವು ಹೆಚ್ಚಾಗುತ್ತದೆ. ಎಲ್ಲಿ ಹೆಚ್ಚಾದ ಪ್ರೇಮವಿರುವುದೋ, ಅಲ್ಲಿ ಢಖೋ (ಹಸ್ತಕ್ಷೇಪ) ಇರುವುದು. ಹಾಗಾಗಿ ಎಲ್ಲಿ ಯಾರು ಹಸ್ತಕ್ಷೇಪವನ್ನು ನಡೆಸುತ್ತಲೇ ಇರುತ್ತಾರೆ, ಅಂತಹ ಜನರಲ್ಲಿ ಪ್ರೇಮವು ಹೆಚ್ಚಾಗಿಯೇ ಇರುತ್ತದೆ. ಪ್ರೇಮ ಇದ್ದಾಗ, ಅಲ್ಲಿ ಹಸ್ತಕ್ಷೇಪವು ಇರುವುದಾಗಿದೆ. ಪೂರ್ವ ಜನ್ಮದ ಪ್ರೇಮವಾಗಿದ್ದರೆ, ಈಗ ಹಸ್ತಕ್ಷೇಪವನ್ನು ಮಾಡುತ್ತಲೇ ಇರುತ್ತಾರೆ. ಅತಿಯಾದ ಪ್ರೇಮ ಇರುವುದರಿಂದ ಹಾಗೆ, ಇಲ್ಲದೆ ಹೋಗಿದ್ದರೆ ಹಸ್ತಕ್ಷೇಪವನ್ನೇ ಮಾಡುತ್ತಿರಲಿಲ್ಲ ಅಲ್ಲವೇ? ಈ ಹಸ್ತಕ್ಷೇಪದ ಸ್ವರೂಪವೇ ಹಾಗೆ.

ಇದನ್ನು ಜನರು ಏನೆಂದು ಹೇಳುತ್ತಾರೆ? 'ಜಗಳವಾಗುವುದರಿಂದಲೇ, ನಮ್ಮಲ್ಲಿ ಪ್ರೇಮವಿದೆ' ಎಂದು. ಆ ಮಾತು ನಿಜವೇ ಆಗಿದೆ. ಆದರೆ, ಅದು ಆಸಕ್ತಿಯಾಗಿದೆ. ಆಸಕ್ತಿಯು ಜಗಳದಿಂದಲೇ ಉಂಟಾಗಿರುವುದಾಗಿದೆ. ಎಲ್ಲಿ ಕಡಿಮೆ ಇರುತ್ತದೆ, ಅಲ್ಲಿ ಆಸಕ್ತಿ ಇರುವುದಿಲ್ಲ. ಯಾರ ಮನೆಯಲ್ಲಿ ಸ್ತ್ರೀ-ಪುರುಷರ ನಡುವೆ ಜಗಳವು ಕಡಿಮೆಯಾಗಿರುತ್ತದೆ, ಅಲ್ಲಿ ಆಸಕ್ತಿಯು ಕಡಿಮೆಯಾಗಿದೆಯೆಂದು ತಿಳಿಯಬೇಕು. ಇದು ಅರಿತು ಕೊಳ್ಳಬೇಕಾದ ವಿಚಾರ ಅಲ್ಲವೇ?

**ಪ್ರಶ್ನಕರ್ತ:** ಸಂಸಾರದ ವ್ಯವಹಾರದಲ್ಲಿ ಕೆಲವೊಂದು ಕಡೆ ಈ ಅಹಂ ಎದ್ದು ಬಿಡುತ್ತದೆ, ಹಾಗಾಗಿ ಅದರಿಂದ ತಾಪದ ಕಿಡಿಗಳು ಮೇಲೇಳುತ್ತವೆ.

**ದಾದಾಶ್ರೀ:** ಅದು 'ಅಹಂ'ನ ತಾಪದ ಕಿಡಿಗಳು ಮೇಲೇಳುವುದಲ್ಲ. ಅದು ಕಾಣಿಸುತ್ತದೆ 'ಅಹಂ'ನ ಕಿಡಿಗಳಂತೆ ಆದರೆ, ಅದು ವಿಷಯದ (ವಿಕಾರಗಳ) ಅಧೀನದಿಂದಾಗಿ ಉಂಟಾಗಿದೆ. ವಿಷಯವು ಇಲ್ಲದೆ ಹೋದರೆ, ಆಗ ಏನೂ ಆಗುವುದಿಲ್ಲ. ವಿಷಯದಿಂದ ಮುಕ್ತರಾಗಿಬಿಟ್ಟರೆ, ಅನಂತರ ಉಳಿದೆಲ್ಲವುಗಳ ಇತಿಹಾಸವೇ ಮುಗಿದುಹೋಗುತ್ತದೆ. ಅಲ್ಲದೆ, ಯಾರು ಒಂದು ವರ್ಷದ ಬ್ರಹ್ಮಚರ್ಯದ ವ್ರತವನ್ನು ಪಾಲಿಸುತ್ತಿದ್ದಾರೆ, ಅವರನ್ನು ನಾನು ಕೇಳಿದರೆ, ಆಗ ಅವರು ಹೇಳುತ್ತಾರೆ, 'ಯಾವ ತಾಪದ ಕಿಡಿಯೂ ಇಲ್ಲ, ಮನಸ್ತಾಪವೂ ಇಲ್ಲ, ಕಿತ್ತಾಟವೂ ಇಲ್ಲ, ಏನೂ ಇಲ್ಲ, ಎಲ್ಲಾ ಸ್ಟಾಂಡ್-ಸ್ಟಿಲ್!' ನಾನು ಅವರನ್ನು ಕೇಳಿದೆನಾದರೂ, ನನಗೆ ಅದು ತಿಳಿದಿದೆ, ಈಗ ಹಾಗೆಯೇ ಬದಲಾವಣೆ ಆಗುವುದೆಂದು. ಅದರಿಂದ ತಿಳಿಯುತ್ತದೆ, ಎಲ್ಲಾ ಈ ವಿಷಯದಿಂದಲೇ ಆಗಿದೆ ಎಂದು.

**ಪ್ರಶ್ನಕರ್ತ:** ಮೊದಲಿಗೆ ನಾವು ಏನು ತಿಳಿದಿದ್ದೆವು, ಈ ಮನೆಯ ಕೆಲಸಕಾರ್ಯಗಳ ವಿಚಾರವಾಗಿ ಸಂಘರ್ಷಣೆಯು ಉಂಟಾಗುತ್ತಿರಬಹುದು ಎಂದು. ಆಗ ಮನೆಯ ಕೆಲಸಗಳಲ್ಲಿ ಹೆಲ್ಪ್ ಮಾಡಿಕೊಟ್ಟರು ಸಹ, ಸಂಘರ್ಷಣೆಗಳು ಉಂಟಾಗುತ್ತಲೇ ಇತ್ತು.

**ದಾದಾಶ್ರೀ:** ಅವೆಲ್ಲಾ ಸಂಘರ್ಷಣೆಗಳು ಉಂಟಾಗುವವೇ ಆಗಿವೆ. ಅದು, ಎಲ್ಲಿಯವರೆಗೆ ವಿಕಾರಗಳ ವಿಚಾರವಿದೆ, ಸಂಬಂಧವಿದೆ, ಅಲ್ಲಿಯವರೆಗೆ ಸಂಘರ್ಷಣೆಯು ಉಂಟಾಗುವುದೇ ಆಗಿದೆ. ಸಂಘರ್ಷಣೆಯ ಮೂಲ ಕಾರಣವೇ ಇದಾಗಿದೆ. ಯಾರು ವಿಷಯವನ್ನು ಗೆದ್ದರೋ, ಅವರನ್ನು ಯಾರೂ ಸೋಲಿಸಲು ಸಾಧ್ಯವಿಲ್ಲ ಹಾಗೂ ಎಲ್ಲರೂ ಅವರ ಹೆಸರನ್ನು ಹೇಳಲು ಕೂಡಾ ಅಂಜುತ್ತಾರೆ. ಅಲ್ಲದೆ, ಬೇರೆಯವರ ಮೇಲೆ ಅವರ ಪ್ರಭಾವವು ಪರಿಣಾಮಬೀರುತ್ತದೆ!

## ಸಂಘರ್ಷಣೆಯು ಸ್ಥೂಲದಿಂದ ಸೂಕ್ಷ್ಮದವರೆಗೆ

**ಪ್ರಶ್ನಕರ್ತ:** ನಿಮ್ಮ 'ಸಂಘರ್ಷಣೆಯನ್ನು ತಪ್ಪಿಸಿ' ಎನ್ನುವ ವಾಕ್ಯದ ಪಾಲನೆಯನ್ನು ಮಾಡುತಲಿದ್ದರೆ, ಕೊನೆಗದು ಮೋಕ್ಷಕ್ಕೆ ಕಳುಹಿಸುವುದಾಗಿದೆ ನಿಜ! ಆದರೆ, ಸ್ಥೂಲದಲ್ಲಾಗುವ ಸಂಘರ್ಷಣೆಗಳನ್ನು ತಪ್ಪಿಸಿ ಮತ್ತೆ ನಿಧಾನವಾಗಿ ಮುಂದುವರಿಯುತ್ತಾ ಹೋದಂತೆ 'ಸೂಕ್ಷ್ಮ'ದಲ್ಲಾಗುವ ಸಂಘರ್ಷಣೆಗಳನ್ನು, 'ಸೂಕ್ಷ್ಮತರ್'ದಲ್ಲಾಗುವ ಸಂಘರ್ಷಣೆಗಳನ್ನು ತಪ್ಪಿಸುವುದರ ಬಗ್ಗೆ ತಿಳಿಸಿಕೊಡಿ.

**ದಾದಾಶ್ರೀ:** ಅದು ತನ್ನಷ್ಟಕ್ಕೇ ಅರಿವು (ಸೂಜ್) ಮೂಡುತಲಿರುತ್ತದೆ. ಆ ಪಥದಲ್ಲಿ ಮುಂದುವರಿದುಕೊಂಡು ಹೋದ ಮೇಲೆ ಯಾರಿಗೆ ಏನೂ ಕಲಿಸಿಕೊಡಬೇಕಾಗಿಲ್ಲ, ಅದರಷ್ಟಕ್ಕೆ ಬಂದುಬಿಡುತ್ತದೆ. ಈ ಶಬ್ಧವೇ ಹಾಗಿದೆ, ಅದು ಕೊನೆಗೆ ಮೋಕ್ಷಕ್ಕೆ ಕರೆದುಕೊಂಡು ಹೋಗುತ್ತದೆ.

ಹಾಗೆಯೇ ಮತ್ತೊಂದು ವಾಕ್ಯ, 'ಅನುಭವಿಸುವವರದ್ದೇ ತಪ್ಪು', ಎನ್ನುವುದು ಕೂಡಾ ಮೋಕ್ಷಕ್ಕೆ ಕರೆದುಕೊಂಡು ಹೋಗುತ್ತದೆ. ಈ ಪ್ರತಿಯೊಂದು ಶಬ್ದವು ಮೋಕ್ಷಕ್ಕೆ ಕರೆದುಕೊಂಡು ಹೋಗುವುದಾಗಿದೆ. ಅದರ ಗ್ಯಾರೆಂಟಿ ನಮ್ಮದು.

**ಪ್ರಶ್ನಕರ್ತ:** ಈ ಮೊದಲು ನೀವು ಹಾವಿನ, ಕಂಬದ ಹಾಗೂ ಇನ್ನು ಹಲವು ಸ್ಥೂಲದ ಸಂಘರ್ಷಣೆಗೆ ಸಂಬಂಧಪಟ್ಟ ಉದಾಹರಣೆಗಳನ್ನು ನೀಡಿದ್ದೀರಿ. ಈಗ ಸೂಕ್ಷ್ಮದ, ಸೂಕ್ಷ್ಮತರ್ ಹಾಗೂ ಸೂಕ್ಷ್ಮತಮ್ ಬಗ್ಗೆ ಉದಾಹರಣೆಗಳನ್ನು ನೀಡಿ. ಸೂಕ್ಷ್ಮದಲ್ಲಿ ಸಂಘರ್ಷಣೆಗಳು ಹೇಗೆ ನಡೆಯುತ್ತವೆ?

**ದಾದಾಶ್ರೀ:** ನಿನ್ನ ತಂದೆಯೊಂದಿಗೆ ನಡೆಯುತ್ತದೆಯಲ್ಲ, ಅದೆಲ್ಲಾ ಸೂಕ್ಷ್ಮ ಸಂಘರ್ಷಣೆಗಳು.

**ಪ್ರಶ್ನಕರ್ತ:** ಸೂಕ್ಷ್ಮ ಎಂದರೆ, ಅದು ಮಾನಸಿಕವೇ? ವಾಣಿಯಿಂದ ನಡೆಯುವ ಸಂಘರ್ಷಣೆಯು ಕೂಡಾ ಸೂಕ್ಷ್ಮವಾಗಿದೆಯೇ?

**ದಾದಾಶ್ರೀ:** ಅದು ಸ್ಥೂಲವಾಗಿದೆ. ಯಾವುದು ಮತ್ತೊಬ್ಬರಿಗೆ ತಿಳಿಯದಂತೆ ನಡೆಯುತ್ತದೆ, ಯಾವುದು ಹೊರನೋಟಕ್ಕೆ ಕಾಣಿಸುವುದಿಲ್ಲ, ಅಂಥದ್ದು ಸೂಕ್ಷ್ಮವಾಗಿದೆ.

**ಪ್ರಶ್ನಕರ್ತ:** ಈ ಸೂಕ್ಷ್ಮ ಸಂಘರ್ಷಣೆಯನ್ನು ಯಾವ ರೀತಿಯಿಂದ ತಪ್ಪಿಸಬಹುದು?

**ದಾದಾಶ್ರೀ:** ಮೊದಲು ಸ್ಥೂಲ, ನಂತರ ಸೂಕ್ಷ್ಮ , ಅನಂತರ ಸೂಕ್ಷ್ಮತರ್ ಹಾಗೂ ಕೊನೆಯಲ್ಲಿ ಸೂಕ್ಷ್ಮತಮ್ ಸಂಘರ್ಷಣೆಗಳನ್ನು ತಪ್ಪಿಸಬೇಕು.

**ಪ್ರಶ್ನಕರ್ತ:** ಸೂಕ್ಷ್ಮತರ್ ಸಂಘರ್ಷಣೆಗಳೆಂದು ಯಾವುದನ್ನು ಕರೆಯುವುದು?

**ದಾದಾಶ್ರೀ:** ನೀನು ಯಾರನ್ನಾದರೂ ಹೊಡೆಯುತ್ತಿರುವಾಗ, ಅವನು (ಜ್ಞಾನದಲ್ಲಿರುವವನು) ಜ್ಞಾನದಿಂದ ನೋಡುತ್ತಾನೆ, 'ನಾನು ಶುದ್ಧಾತ್ಮ,' 'ವ್ಯವಸ್ಥಿತ್ ಹೊಡೆಸುತ್ತಿದೆ,' ಈ ಎಲ್ಲವನ್ನು ತಿಳಿದಿರುತ್ತಾನೆ. ಆದರೂ, ಮನಸ್ಸಿನಲ್ಲಿ ಸಹಜವಾಗಿಯೇ ದೋಷವು ಕಂಡುಬಿಡುತ್ತದೆ, ಇದು 'ಸೂಕ್ಷ್ಮತರ್'ದ ಸಂಘರ್ಷಣೆಯಾಗಿದೆ.

**ಪ್ರಶ್ನಕರ್ತ:** ಮತ್ತೊಮ್ಮೆ ಹೇಳಿ, ಅದು ಸರಿಯಾಗಿ ಅರ್ಥವಾಗಲಿಲ್ಲ.

**ದಾದಾಶ್ರೀ:** ಈ ಎಲ್ಲಾ ಜನರ ದೋಷಗಳನ್ನು ನೀನು ನೋಡಿದರೆ, ಅದು ಸೂಕ್ಷ್ಮತರ್ ಸಂಘರ್ಷಣೆಯಾಗಿದೆ.

**ಪ್ರಶ್ನಕರ್ತ:** ಅಂದರೆ, ಬೇರೆಯವರ ದೋಷವನ್ನು ನೋಡಿದರೆ, ಅದು 'ಸೂಕ್ಷ್ಮತರ್'ದ ಸಂಘರ್ಷಣೆಯಾಗಿದೆ.

**ದಾದಾಶ್ರೀ:** ಹಾಗಲ್ಲ, ಸ್ವತಃ ತಾನೇ ನಿಶ್ಚಯ ಮಾಡಲಾಗಿತ್ತು, ಅದೇನೆಂದರೆ 'ಮತ್ತೊಬ್ಬರಲ್ಲಿ ದೋಷವು ಇಲ್ಲವೇಯಿಲ್ಲ' ಎಂದು. ಆದರೂ ದೋಷವು ಕಾಣಿಸಿದರೆ, ಅದು 'ಸೂಕ್ಷ್ಮತರ್'ದ ಸಂಘರ್ಷಣೆ. ಅದಕ್ಕೆ ಕಾರಣವೇನೆಂದರೆ, ಅವರು ಶುದ್ಧಾತ್ಮ ಹಾಗು ಅವರಲ್ಲಿ ಕಾಣುವ ದೋಷ ಬೇರೆ.

**ಪ್ರಶ್ನಕರ್ತ:** ಹಾಗಾದರೆ ಅದು ಮಾನಸಿಕ ಸಂಘರ್ಷಣೆಯೆಂದು ಹೇಳಿದಿರಿ, ಅದೇ ಅಲ್ಲವೇ?

**ದಾದಾಶ್ರೀ:** ಈ ಮಾನಸಿಕವೆಲ್ಲಾ ' ಸೂಕ್ಷ್ಮ'ವಾಗಿದೆ.

**ಪ್ರಶ್ನಕರ್ತ:** ಹಾಗಿದ್ದರೆ ಈ ಎರಡರ ನಡುವೆ ಏನು ವ್ಯತ್ಯಾಸವಿದೆ?

**ದಾದಾಶ್ರೀ:** ಅದು, ಅಲ್ಲಿ ಮನಸ್ಸಿಗಿಂತ ಇನ್ನು ಮೇಲಿನ ಮಾತು.

**ಪ್ರಶ್ನಕರ್ತ:** ಅಂದರೆ, ಈ ಸೂಕ್ಷ್ಮತರ್ ಸಂಘರ್ಷಣೆಯು ನಡೆಯುತ್ತಿರುವಾಗ, ಆ ಸಮಯದಲ್ಲಿ ಸೂಕ್ಷ್ಮ ಸಂಘರ್ಷಣೆಯು ಕೂಡಾ ಜೊತೆಯಲ್ಲಿ ಇರುತ್ತದೆ ಅಲ್ಲವೇ?

**ದಾದಾಶ್ರೀ:** ಅದನ್ನು ನಾವು ನೋಡಬೇಕಾಗಿಲ್ಲ. ಸೂಕ್ಷ್ಮ ಬೇರೆಯಾಗಿದೆ, ಸೂಕ್ಷ್ಮತರ್ ಬೇರೆಯಾಗಿದೆ. ಸೂಕ್ಷ್ಮತಮ್ ಎನ್ನುವುದು ಅಂತಿಮದ ಮಾತು.

**ಪ್ರಶ್ನಕರ್ತ**: ಹಿಂದೊಮ್ಮೆ ಸತ್ಸಂಗದಲ್ಲಿಯೇ ಹೀಗೆಂದು ಮಾತನಾಡಲಾಗಿತ್ತು. ಏನೆಂದರೆ, ನಾನು ಚಂದೂಲಾಲ್ ಜೊತೆ ತನ್ಮಯಾಕಾರವಾಗಿ ಹೋದರೆ, ಅದನ್ನು ಸೂಕ್ಷ್ಮತಮ್ ಸಂಘರ್ಷಣೆಯೆಂದು ಹೇಳಲಾಗುತ್ತದೆ, ಎಂದು.

**ದಾದಾಶ್ರೀ:** ಹೌದು, ಸೂಕ್ಷ್ಮತಮ್ ಸಂಘರ್ಷಣೆಯಾಗಿದೆ! ಅದನ್ನು ತಪ್ಪಿಸಬೇಕು. ತಪ್ಪಾಗಿ ತನ್ಮಯಾಕಾರ ಹೊಂದಲಾಗಿದೆ ಅಲ್ಲವೇ. ನಂತರ ತಿಳಿಯುತ್ತದೆ, ಅದು ತಪ್ಪಾಗಿ ಹೋಗಿದೆ ಎಂದು.

**ಪ್ರಶ್ನಕರ್ತ:** ಹಾಗಾದರೆ ಈ ಸಂಘರ್ಷಣೆಯನ್ನು ತಪ್ಪಿಸಲು ಮಾಡಬೇಕಾದ ಉಪಾಯ ಕೇವಲ ಪ್ರತಿಕ್ರಮಣ ಮಾತ್ರವೇ ಅಥವಾ ಬೇರೆ ಏನಾದರು ಇದೆಯೇ?

**ದಾದಾಶ್ರೀ:** ಬೇರೆ ಯಾವ ಅಸ್ತ್ರವೂ ಇಲ್ಲ. ಈ ನಮ್ಮ ನವ-ಕಲಮ್, ಅದು ಸಹ ಪ್ರತಿಕ್ರಮಣವೇ ಆಗಿದೆ. ಬೇರೆ ಯಾವ ಆಯುಧವೂ ಇಲ್ಲ. ಈ ಜಗತ್ತಿನಲ್ಲಿ ಪ್ರತಿಕ್ರಮಣವನ್ನು ಬಿಟ್ಟರೆ ಬೇರೆ ಯಾವ ಸಾಧನವಿಲ್ಲ. ಇದು ಅತಿ ಉತ್ತಮವಾದ ಸಾಧನವಾಗಿದೆ. ಏಕೆಂದರೆ, ಈ ಜಗತ್ತು ಅತಿಕ್ರಮಣದಿಂದಾಗಿ ಎದ್ದು ನಿಂತಿದೆ.

**ಪ್ರಶ್ನಕರ್ತ:** ಇದು ಎಷ್ಟೊಂದು ವಿಸ್ಮಯಕಾರಿಯಾಗಿದೆ! 'ಆಗುವುದೆಲ್ಲಾ ನ್ಯಾಯ' ಮತ್ತು 'ಅನುಭವಿಸುವವರದ್ದೇ ತಪ್ಪು' ಇವು ಒಂದೊಂದೂ ಅದ್ಭುತವಾದ ವಾಕ್ಯಗಳಾಗಿವೆ. ಅಲ್ಲದೆ, 'ದಾದಾ'ರವರ ಸಾಕ್ಷಿಯಾಗಿ ಪ್ರತಿಕ್ರಮಣವನ್ನು ಮಾಡಿದರೆ, ಆಗ ಅದರ ಸ್ಪಂದನಗಳು ಅವರಿಗೆ ತಲಪುವುದರಲ್ಲಿ ಸಂಶಯವೇ ಇಲ್ಲ.

**ದಾದಾಶ್ರೀ:** ಹೌದು, ನಿಜವಾಗಿದೆ. ಸ್ಪಂದನವು ತಕ್ಷಣ ತಲುಪುತ್ತದೆ ಹಾಗೂ ಅದರ ಪ್ರತಿಫಲವೂ ಸಿಕ್ಕಿಬಿಡುತ್ತದೆ. ನಿಮಗೆ ಖಾತರಿಯಾಯಿತೇ, ಅದರ (ಪ್ರತಿಕ್ರಮಣದ) ಪರಿಣಾಮ ಬೀರುತ್ತಿದೆ ಎಂದು!

**ಪ್ರಶ್ನಕರ್ತ:** ದಾದಾ, ಪ್ರತಿಕ್ರಮಣವು ಎಷ್ಟು ಸಹಜವಾಗಿ ಆಗಿಬಿಡುತ್ತದೆಂದರೆ, ಆ ಕ್ಷಣದಲ್ಲೇ! ಇದಂತೂ ಬಹಳ ಆಶ್ಚರ್ಯವಾಗಿದೆ, ದಾದಾ! ಈ 'ದಾದಾ'ರವರ ಕೃಪೆಯು ಅದ್ಭುತವಾಗಿದೆ!

**ದಾದಾಶ್ರೀ:** ಹೌದು, ಇದು ಅದ್ಭುತವಾಗಿದೆ! ಸೈಂಟಿಫಿಕ್ ವಸ್ತುವಾಗಿದೆ!

-ಜೈ ಸಚ್ಚಿದಾನಂದ್

************

# ಸಂಪರ್ಕಿಸಿ

## ದಾದಾ ಭಗವಾನ್ ಪರಿವಾರ


**ಅಡಾಲಜ್:** ತ್ರಿಮಂದಿರ್ ಸಂಕುಲ್, ಸೀಮಂಧರ್ ಸಿಟಿ, ಅಹಮದಾಬಾದ್–ಕಲೋಲ್ ಹೈವೇ, ಪೋಸ್ಟ್: ಅಡಾಲಜ್, ಜಿ.–ಗಾಂಧೀನಗರ್, ಗುಜರಾತ್–382421. ಫೋನ್: (079) 39830100, ಇಮೇಲ್: info@dadabhagwan.org

**ಅಹಮದಾಬಾದ್:** ದಾದಾ ದರ್ಶನ್, 5, ಮಮತಾಪಾರ್ಕ್ ಸೊಸೈಟಿ, ನವಗುಜರಾತ್ ಕಾಲೇಜಿನ ಹಿಂಭಾಗದಲ್ಲಿ, ಉಸ್ಮಾನ್‌ಪುರಾ, ಅಹಮದಾಬಾದ್ – 380014, ಫೋನ್: (079) 27540408

| | | | |
|---|---|---|---|
| **ಮುಂಬೈ** | 9323528901 | **ಬೆಂಗಳೂರು** | 9590979099 |
| **ದೆಹಲಿ** | 9810098564 | **ಹೈದರಾಬಾದ್** | 9989877786 |
| **ಕೊಲ್ಕತ್ತಾ** | (033)–32933885 | **ಚೆನ್ನೈ** | 9380159957 |
| **ಜಯಪುರ** | 9351408285 | **ಪೂನಾ** | 9422660497 |
| **ಭೂಪಾಲ** | 9425024405 | **ಯುಎಇ** | +971 557316937 |
| **ಇಂದೋರ್** | 9893545351 | **ಯು.ಕೆ.** | +44330–111–(3232) |
| **ಜಬಲ್ಪುರ** | 9425160428 | **ಕೀನ್ಯಾ** | +254 722 722 063 |
| **ರಾಯಪುರ** | 9329523737 | **ಸಿಂಗಪೂರ್** | +65 81129229 |
| **ಬಿಲಾಯ್** | 9827481336 | **ಆಸ್ಟ್ರೇಲಿಯಾ** | +61 421127947 |
| **ಪಟ್ನಾ** | 9431015601 | **ನ್ಯೂಜಿಲ್ಯಾಂಡ್** | +64 21 0376434 |
| **ಅಮರಾವತಿ** | 9422915064 | **ಯು.ಎಸ್.ಎ.** | +1 877–505–DADA (3232) |
| **ಜಲಂಧರ್** | 9814063043 | | |

Website: www.dadabhagwan.org



# ಸಂಘರ್ಷಣೆಯನ್ನು ತಪ್ಪಿಸಿ

ನಾವು ರಸ್ತೆಯಲ್ಲಿ ಕಾಳಜಿಯಿಂದ ಚಲಿಸುತ್ತಿರುವಾಗ ಎದುರಿನ ವ್ಯಕ್ತಿಯು ಸರಿಯಿಲ್ಲದೆ ಇದ್ದು ಹೇಗೆಂದರೆ ಹಾಗೆ ಬಂದು ನಮಗೆ ಹೊಡೆದು ಹಾನಿಯನ್ನುಂಟು ಮಾಡಬಹುದು, ಅದು ಬೇರೆ ವಿಚಾರವಾಗಿದೆ. ಆದರೆ, ನಮಗೆ ಹಾನಿಪಡಿಸಬೇಕೆಂಬ ಇರಾದೆ ಇರಬಾರದು. ನಾವು ಅವರಿಗೆ ಹಾನಿಮಾಡಲುಹೋದರೆ ಆಗ ನಮಗೂ ಹಾನಿಯು ಉಂಟಾಗುವುದು. ಯಾವಾಗಲೂ ಪ್ರತಿಯೊಂದು ಸಂಘರ್ಷಣೆಯಿಂದ ಇಬ್ಬರಿಗೂ ನಷ್ಟವಾಗುತ್ತದೆ. ನೀವು ಎದುರಿನವರಿಗೆ ದುಃಖವನ್ನು ಕೊಡಲು ಹೋದರೆ, ಜೊತೆಗೆ ನಿಮಗೂ ಆಗಿಂದಾಗಲೇ 'ಅನ್ ದಿ ಮೊಮೆಂಟ್' ದುಃಖವಾಗದೆ ಇರುವುದಿಲ್ಲ!

ಹಾಗಾಗಿ, ನಾವು ಈ ದಾಖಲೆಯನ್ನು ನೀಡಿರುವುದಾಗಿದೆ. ಅದೇನೆಂದರೆ, ರಸ್ತೆಯ ಮೇಲೆ ಚಲಿಸುವ ವಾಹನಗಳ ವ್ಯವಹಾರದ ಧರ್ಮವು ಏನೆಂದು ತಿಳಿಸುತ್ತದೆ, 'ಸಂಘರ್ಷಣೆಗೆ ಒಳಪಟ್ಟರೆ ನಿನ್ನ ಮೃತ್ಯು; ಸಂಘರ್ಷಣೆಯಿಂದ ಅಪಾಯವಿದೆ' ಎಂದು. ಆದುದರಿಂದ ಯಾರೊಂದಿಗೂ ಸಂಘರ್ಷಣೆಗೆ ಒಳಪಡಬಾರದು. ಹಾಗೆಯೇ, ವ್ಯಾವಹಾರಿಕ ಕಾರ್ಯಗಳಲ್ಲಿ ಸಹ ಸಂಘರ್ಷಣೆಗೆ ಅವಕಾಶಕೊಡಬಾರದು. ಅದಕ್ಕಾಗಿಯೇ, 'ಸಂಘರ್ಷಣೆಯನ್ನು ತಪ್ಪಿಸಿ.'

-ದಾದಾಶ್ರೀ

ISBN 978-93-87551-25-1

Printed in India

Price ₹15

dadabhagwan.org